ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಶಿಕ್ಷಕರ (ಹಂಗಾಮಿ ಉಪನ್ಯಾಸಕರ ವಿಲಿನೀಕರಣ ವಿಧೇಯಕ.

(ಮುಂದುವರೆದ ಚರ್ಚೆ)

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರುವಂತಹ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಶಿಕ್ಷಕರ (ಹಂಗಾಮಿ ಉಪನ್ಯಾಸಕರ ವಿಲಿನೀಕರಣ) ವಿಧೇಯಕದ ಬಗ್ಗೆ ಕೆಲವು ಸಂಶಯಗಳನ್ನು ನಾನು ವ್ಯಕ್ತಪಡಿಸುತ್ತೇನೆ. ಮಾನ್ಯ ಮಂತ್ರಿಗಳು ಕೆಲವು ಜನರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಈ ಒಂದು ವಿಧೇಯಕವನ್ನು ತಂದಿದ್ದರೂ ಕೂಡ ಇದರ ಒಂದು ಪರಿಣಾಮ ಬೇರೆ ಜನರ ಮೇಲೆ ಎಷ್ಟಾಗುತ್ತದೆಂಬುದನ್ನು ಸರ್ಕಾರದವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಕೆಲವು ಲೆಕ್ಚರರ್ಸ್, ಪ್ರೊಫೆಸರ್ಸ್ ಮತ್ತು ಅಧ್ಯಾಪಕರುಗಳಿಗೆ ಸಹಾಯ ಮಾಡಬೇಕೆಂಬ ಒಂದು ಮಾನವೀಯತೆಯ ದೃಷ್ಟಿಯಿಂದ ಇದನ್ನು ತಂದಿದ್ದರೂ ಕೂಡ ಇನ್ನೊಂದು ಕಡೆ ಈ ನಮ್ಮ ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟ ಜನರು ಏನಿದ್ದಾರೆ ಮತ್ತು ತಲೆತಲಾಂತರ ಗಳಿಂದ ವಿದ್ಯಾಭ್ಯಾಸ ಅಂದರೆ ಏನು ಎಂಬುದು ಗೊತ್ತಿಲ್ಲದ ಜನರು ಏನಿದ್ದಾರೆ, ಅಂತಹ ಜನರಿಗೆ ನಮ್ಮ ಸಂವಿಧಾನದಲ್ಲಿ ಕೆಲವು ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದಾರೆ. ಈ ಜನರಿಗೆ ಉದ್ಯೋಗಗಳಲ್ಲಿ ಕೂಡ ಕೆಲವು ರಿಜರ್ವೇಷನ್‌ಗಳನ್ನು ಕೂಡ ಇಟ್ಟಿದ್ದಾರೆ. ಇಂತಹ ಒಂದು ಸೌಲಭ್ಯಗಳನ್ನು ಎಸ್. ಸಿ. ಮತ್ತು ಎಸ್. ಟಿ. ಜನರಿಗೆ ಒದಗಿಸಿದ್ದರೂ ಸಹ, ಅದು ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಇದು ಕೇವಲ ಜನತಾ ಸರ್ಕಾರದ ತಪ್ಪು ಎಂದು ನಾನು ಹೇಳುವುದಿಲ್ಲ. ಬಹುಶಃ ಎಲ್ಲ ಸರ್ಕಾರಗಳಲ್ಲಿಯೂ ಸಹ ಈ ಜನರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿರುವವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇವೊತ್ತು ಏನಾಗಿದೆ ಎಂದರೆ, ನಾವು ಒಂದು ಕಡೆ ರಾಜಕೀಯ ದೃಷ್ಟಿ ಇಟ್ಟುಕೊಂಡು ಕೆಲವು ನೇಮಕಗಳನ್ನು ಮಾಡುತ್ತೇವೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿಯಾಗಲೀ, ಮೈಸೂರು ವಿಶ್ವವಿದ್ಯಾನಿಲಯದಲ್ಲಿಯಾಗಲೀ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿಯಾಗಲೀ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿಯಾಗಲೀ, ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿಯಾಗಲೀ, ಕೃಷಿವಿಶ್ವವಿದ್ಯಾನಿಲಯದಲ್ಲಿಯಾಗಲೀ, ಇಲ್ಲಿ ಕೆಲಸ ಮಾಡುವಂತಹ ಉಪಕುಲಪತಿಗಳು ತಮ್ಮ ತಮ್ಮ ಜನಾಂಗಗಳ ಜನರನ್ನೇ ಕೆಲಸಕ್ಕೆ ತೆಗೆದುಕೊಂಡು ನಂತರ ಅವರನ್ನೇ ಖಾಯಂ ಮಾಡತಕ್ಕಂಥ ಒಂದು ಪದ್ಧತಿ ಮೊದಲಿನಿಂದಲೂ ನಡೆದುಕೊಂಡು ಬಂದಿರುವುದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಇದು ಕೇವಲ ನೀವು ಅಧಿಕಾರಕ್ಕೆ ಬಂದಮೇಲೆ ನಡೆದಿದೆ ಎಂದು ನಾನು ಹೇಳುತ್ತಿಲ್ಲ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದೇ ರೀತಿ ಬೋರ್ಡ್ಸ್ ಮತ್ತು ಕಾರ್ಪೊರೇಷನ್‌ಗಳಲ್ಲಿ ಸಹ ನಡೆದುಕೊಂಡು ಬಂದಿದೆ. ನಮ್ಮ ಸಂವಿಧಾನದಲ್ಲಿರುವ ಕೆಲವು ಸವಲತ್ತುಗಳನ್ನು ಸಂಬಂಧಪಟ್ಟವರಿಗೆ ಒದಗಿಸಿಕೊಡಬೇಕು, ನಮ್ಮ ಸಮಾಜದಲ್ಲಿರುವ ಎಲ್ಲ ವರ್ಗದ ಜನರಿಗೂ ಲಾಭವಾಗಬೇಕೆಂಬ ಬಹಳ ಜನ ಸದಿಚ್ಛೆಯನ್ನು ಇಟ್ಟುಕೊಂಡು ನಮ್ಮ ಉಪಕುಲಪತಿಗಳು ಕೆಲಸ ಮಾಡುತ್ತಿಲ್ಲ ಎನ್ನುವುದಕ್ಕೆ ನಾನು ಕೆಲವು ಅಂಕಿಅಂಶಗಳನ್ನು ಇಲ್ಲಿ ಕೊಡುತ್ತೇನೆ. ಕೆಲವರು ತಮ್ಮ ಪ್ರತಿ ಭಾಷಣದಲ್ಲಿಯೂ ಈ ಎಸ್. ಸಿ. ಮತ್ತು ಎಸ್. ಟಿ. ಜನರ ಹೆಸರು ಹೇಳುತ್ತಾರೆ. ತಾವು ಇವರಿಗೋಸ್ಕರವೇ ಕೆಲಸ ಮಾಡುತ್ತಿದ್ದೇವೆ, ಇವರ ಕಲ್ಯಾಣಕ್ಕೋಸ್ಕರವೇ ಕೆಲಸ ಮಾಡುತ್ತಿದ್ದೇವೆ, ಇವರ ಕಲ್ಯಾಣಕ್ಕಾಗಿ ಕೆಲವೊಂದು ಯೋಜನೆಗಳನ್ನು ಜಾರಿಗೆ ತಂದಿದ್ದೇವೆಂದು ಹೇಳುತ್ತಾರೆ. ಆದರೆ ಇಂತಹ ವರ ಕೈಯಲ್ಲಿ ಅಧಿಕಾರ ಬಂದಾಗ, ಈ ಜನರಿಗೆ ಸಹಾಯ ಮಾಡುವ ಪರಿಸ್ಥಿತಿ ಬಂದಾಗ ಈ ಜನರು ಯಾವ ರೀತಿ ಕೆಲಸ ಮಾಡಿದ್ದಾರೆಂಬ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಇವೊತ್ತು ನಮ್ಮ ರಾಜ್ಯದಲ್ಲಿ ಸುಮಾರು ಏಳೆಂಟು ವಿಶ್ವವಿದ್ಯಾನಿಲಯಗಳಿವೆ. ಈ ವಿಶ್ವವಿದ್ಯಾನಿಲಯಗಳಲ್ಲಿ ನೇಮಕಗಳು ಯಾವರೀತಿ ಆಗಿದೆ ಎಂಬುದನ್ನು ನಾವು ನೋಡಬೇಕಾಗಿದೆ.

ಉದಾಹರಣೆಗೆ ನಮ್ಮ ಮೈಸೂರು ಯೂನಿವರ್ಸಿಟಿ ಬಗ್ಗೆ ಹೇಳುತ್ತೇನೆ. ಇದು ೧೯೭೯–೮೦ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯವರು ಸಲ್ಲಿಸಿದಂಥ ಒಂದು ವರದಿ. ಇದರಲ್ಲಿ ಅವರು ಹೇಳಿದ್ದಾರೆ. ಮೈಸೂರು ಯೂನಿವರ್ಸಿಟಿ ನಮ್ಮ ರಾಜ್ಯದಲ್ಲೇ ಅತ್ಯಂತ ಹಳೆಯ ಯೂನಿವರ್ಸಿಟಿ. ನನಗೆ ಅನಿಸಿದ ಮಟ್ಟಿಗೆ ೧೯೧೬ರಲ್ಲಿ ಸ್ಥಾಪನೆಯಾದಂಥಾದ್ದು ಈ ಒಂದು ವಿಶ್ವವಿದ್ಯಾನಿಲಯ. ಈ ವಿಶ್ವವಿದ್ಯಾನಿಲಯದಲ್ಲಿ ಆಂದಿನ ಕಾಲದಲ್ಲಿ ಸುಮಾರು ಪ್ರೊಫೆಸರ್ ಕೇಡರ್‌ನಲ್ಲಿ ೬೯ ಜನ

ಇದ್ದರೆ ಅವರಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್‌ನವರು ಕೇವಲ ಒಬ್ಬರು. ಅಂದರೆ ಪರ್ಸೆಂಟೇಜ್ ೧.೪೫ ಆಯಿತು. ರೀಡರ್ಸ್ ಸ್ಕೇಲ್‌ನಲ್ಲಿರತಕ್ಕವರು ಸುಮಾರು ೯೦ ಜನ, ಅವರಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್ ಕೇವಲ ೪ ಜನ, ಅಂದರೆ ೪.೪೫ ಪರ್ಸೆಂಟ್. ಲೆಕ್ಚರರ್ಸ್‌ನಲ್ಲಿ ಸುಮಾರು ೨೮೮ ಜನ ಇದ್ದರೆ ಅವರಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್ ಸಮಾಜಕ್ಕೆ ಸೇರಿದವರು ೪ ಜನ, ಅಂದರೆ ೧.೪ ಪರ್ಸೆಂಟ್. ಟ್ಯೂಟರ್ಸ್‌ನ ೩೭ ಜನ ಇದ್ದರೆ ಪೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಕೇವಲ ಒಬ್ಬರು, ಅಂದರೆ ೨.೭ ಪರ್ಸೆಂಟ್. ಟೆಕ್ನಿಕಲ್ ಸ್ಟಾಫ್‌ನಲ್ಲಿ ಒಟ್ಟು ೪೪೬ ಇದ್ದರೆ ಅವರಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್, ಪೆಡ್ಯೂಲ್ಡ್ ಟ್ರೈಬ್ಸ್‌ನವರು ಕೇವಲ ೧೯, ಅಂದರೆ ಕೇವಲ ೩ ಪರ್ಸೆಂಟ್. ಮಿನಿಸ್ಟೀರಿಯಲ್ ಸ್ಟಾಫ್ ಕ್ಲರ್ಕ್ಸ್, ಸೂಪರಿಂಟೆಂಡ್ಸ್, ಅಕೌಂಟ್ಸ್‌ನವರು ಅವರು ಇವರು ೪೨೫ ಜನ ಇದ್ದರೆ ಅದರಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್ ಸಮಾಜಕ್ಕೆ ಸೇರಿದಂತಹವರು ಕೇವಲ ೮ ಜನ, ಅಂದರೆ ಅದರಲ್ಲಿ ಕೇವಲ ೫ ಪರ್ಸೆಂಟ್. ಆಮೇಲೆ ಕ್ಲಾಸ್-೪. ಇದಂತೂ ಯೂಜುವಲಿ ಇವರಿಗೆ ರಿಸರ್ವ್ ಮಾಡಿ ಇಟ್ಟಿರುತ್ತಾರೆ. ಕಸ ಗುಡಿಸುವ ಮಂತ್ರಿತರ ಕೆಲಸ ಮಾಡುವವರು. ಆದರೆ ಅದರಲ್ಲೂ ಕೂಡ ಅವರಿಗೆ ಎಂಪ್ಲಾಯ್‌ಮೆಂಟ್ ಕೊಡಲಿಕ್ಕೆ ಆಗಿಲ್ಲ. ೪೫೭ ರಲ್ಲಿ ಕೇವಲ ೧೫ ಜನರಿಗೆ ಮಾತ್ರ ಕೊಟ್ಟಿದ್ದಾರೆ, ಅದು ೮.೯೯ ಪರ್ಸೆಂಟ್. ಇದು ಮೈಸೂರು ಯೂನಿವರ್ಸಿಟಿ ಕತೆ. ನನಗೆ ಅನಿಸಿದ ಮಟ್ಟಿಗೆ ಬಹಳ ಪ್ರಭಾವಶಾಲಿ ವ್ಯಕ್ತಿಗಳು ಅಲ್ಲಿಂದ ಬರತಕ್ಕವರು. ಅನೇಕ ಮಂತ್ರಿಗಳು, ಮುಖ್ಯಮಂತ್ರಿಗಳು, ಪೆಡ್ಯೂಲ್ ಕ್ಯಾಸ್ಟ್ ಆಗಲಿ, ಹೊರಗಡೆಯಾಗಲಿ, ಅಲ್ಲಿಂದ ಬರತಕ್ಕವರು. ಆದರೆ ಆ ಜನಾಂಗಕ್ಕೆ ೪ ಪರ್ಸೆಂಟ್‌ಗಿಂತ ಹೆಚ್ಚಿಗೆ ರೆಕ್ರೂಟ್‌ಮೆಂಟ್‌ನಲ್ಲಿ ಸ್ಥಾನಮಾನ ಸಿಕ್ಕಿಲ್ಲ. ಇದು ಮೈಸೂರು ಯೂನಿವರ್ಸಿಟಿ ಕತೆ. ತದನಂತರ ಕರ್ನಾಟಕ ಯೂನಿವರ್ಸಿಟಿ. ಕರ್ನಾಟಕ ಯೂನಿವರ್ಸಿಟಿ, ಇದೂ ಕೂಡ ೧೯೫೦ರಲ್ಲಿ ಸ್ಥಾಪನೆಯಾದಂಥ ಯೂನಿವರ್ಸಿಟಿ. ಅಂದರೆ ಸ್ವಾತಂತ್ರ್ಯ ಸಿಕ್ಕಮೇಲೆ ಬಾಂಬೆ ಪ್ರದೇಶದಲ್ಲಿದ್ದಂಥ ಈ ಒಂದು ಕಾಲೇಜನ್ನು ಇಂಡಿಪೆಂಡೆಂಟಾಗಿ ಯೂನಿವರ್ಸಿಟಿ ಮಾಡಬೇಕು ಎಂದು ೧೯೫೦ರಲ್ಲಿ ಅದಕ್ಕೆ ಯೂನಿವರ್ಸಿಟಿ ರೂಪವನ್ನು ಕೊಟ್ಟರು, ಕೊಟ್ಟಮೇಲೆ ಇಲ್ಲಿಯವರೆಗೆ ಅದರ ಪರಿಸ್ಥಿತಿ ಏನಿದೆಯೆಂದರೆ, ೭೨ ಪ್ರೊಫೆಸರ್ಸ್ ಇದ್ದಾರೆ, ಆ ಕಾಲೇಜಿನಲ್ಲಿ. ಈ ೭೨ರಲ್ಲಿ ಪೆಡ್ಯೂಲ್ಡ್‌ಕ್ಯಾಸ್ಟ್ ನಿಲ್, ಪೆಡ್ಯೂಲ್ ಟ್ರೈಬ್ಸ್ ನಿಲ್. ರೀಡರ್ಸ್ ೧೬೦ರಲ್ಲಿ ಎಸ್.ಸಿ, ನಿಲ್, ಎಸ್.ಟಿ. ನಿಲ್. ನಾನ್ ಮಿನಿಸ್ಟೀರಿಯಲ್ ಸ್ಟಾಫ್-ಟೆಕ್ನಿಕಲ್ ೧೨೨-೩ ಎಂದು ತೋರಿಸಿದ್ದಾರೆ. ಅದರಲ್ಲಿರುವ ೪೦೦ ಜನರಲ್ಲಿ ೩ ಜನ ಮಾತ್ರ ಇದ್ದಾರೆ, ಕೇವಲ ಮೂವರು ಇದ್ದಾರೆ. ನಾನು ತವಕಿಗೆ ಈ ರಿಪೋರ್ಟನ್ನು ಕಳಿಸಿಕೊಡುತ್ತೇನೆ, ಮಾನ್ಯ ಮಂತ್ರಿಗಳಿಗೂ ಕಳಿಸಿಕೊಡುತ್ತೇನೆ. ಅಂದರೆ ಪ್ರೊಫೆಸರ್ಸ್ ಇಲ್ಲ, ರೀಡರ್ಸ್ ಇಲ್ಲ, ಲೆಕ್ಚರರ್ಸ್‌ನಲ್ಲಿ ಇಲ್ಲ, ನಾನ್ ಮಿನಿಸ್ಟೀರಿಯಲ್-ಟೆಕ್ನಿಕಲ್ ಸ್ಟಾಫ್‌ನಲ್ಲಿ ೩೦೦ ಜನರಲ್ಲಿ ಕೇವಲ ೩ ಜನ ಮಾತ್ರ ಇದ್ದಾರೆ. ಆಮೇಲೆ ಮಿನಿಸ್ಟೀರಿಯಲ್ ಸ್ಟಾಫ್‌ನಲ್ಲಿ ಸುಮಾರು ೯೦೦ ಜನರಲ್ಲಿ ಎಸ್.ಸಿ. ೨೮ ಜನ ಇದ್ದಾರೆ, ಎಸ್.ಟಿ. ಇಬ್ಬರು ಇದ್ದಾರೆ. ಅಂದರೆ ಅಲ್ಲಿಗೆ ರೌಂಡ್ ಎಬೌಟ್ ೪ ಪರ್ಸೆಂಟ್ ಜನ ಬರುತ್ತಾರೆ. ಇದು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿರತಕ್ಕ ಪರಿಸ್ಥಿತಿ. ಈ ಒಂದು ವರ್ಗಕ್ಕೆ ಈ ರೀತಿಯಲ್ಲಿ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಈ ಒಂದು ಸಮಾಜಕ್ಕೆ ಅನ್ಯಾಯವಾಗಿದೆಯೆಂದು ಹೇಳಿದರೆ, ಎಲ್ಲವೂ ಸರಿಯಾಗಿದೆಯೆಂದು ವಾದ ಮಾಡುತ್ತಾರೆ. ಮಾನ್ಯ ಬೊಮ್ಮಾಯಿಯವರು ಕೂಡ ವಾದ ಮಾಡಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ ಕೂಡ ಈ ಒಂದು ಜನಾಂಗಕ್ಕೆ ಎಲ್ಲೆಲ್ಲಿ ಪ್ರಾತಿನಿಧ್ಯ ಕೊಡಬಹುದಾಗಿತ್ತೋ, ಅಲ್ಲಲ್ಲಿ ಕೊಟ್ಟಿಲ್ಲ, ಇದು ದುರ್ದೈವದ ಸಂಗತಿ. ಇವತ್ತು ಅನೇಕ ಜನ ಈ ಒಂದು ಸಮಾಜದಲ್ಲೂ ಕೂಡ ಅರ್ಹತೆ ಇರುವವರು ಇದ್ದಾರೆ. ಮಿನಿಸ್ಟೀರಿಯಲ್‌ಗೆ ಸಂಬಂಧಪಟ್ಟಂತೆ ಅಭ್ಯರ್ಥಿಗಳು ಸಿಕ್ಕಿದರೂ ಕೂಡ ಅವರನ್ನು ನೇಮಕ ಮಾಡಿಲ್ಲ. ಇವತ್ತು ಸರ್ಕಾರ ೧೦೦ಕ್ಕೆ ೧೦೦ರಷ್ಟು ಗ್ರಾಂಟ್ ಕೊಡುತ್ತಿದೆ. ಯು.ಜಿ.ಸಿ. ಯಿಂದ ನೆರವು ಸಿಗುತ್ತಿದೆ. ರಾಜ್ಯ ಸರ್ಕಾರ ಡೆವಲಪ್‌ಮೆಂಟ್ ಗ್ರಾಂಟ್ ಕೊಡುತ್ತಿದೆ. ಆದರೂ ರಾಜ್ಯ ಸರ್ಕಾರದ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದರೂ, ಸರ್ಕಾರದ ಗೈಡ್‌ಲೈನ್ಸ್ ಫಾಲೋ ಮಾಡುತ್ತಿಲ್ಲ. ಇವತ್ತಿನ ದಿವಸ ಸರಿಯಾಗಿ ನೇಮಕ ಮಾಡುತ್ತಿಲ್ಲ.

ಶ್ರೀ ಬಿ. ರಾಚಯ್ಯ.—ಇವತ್ತು ಮಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾಡುತ್ತಿಲ್ಲ ಅದನ್ನು ತೋರಿಸುತ್ತೇನೆ. ತದನಂತರ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ತಮ್ಮ ಗಮನಕ್ಕೆ ತರುತ್ತೇನೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರುಗಳ ಸಂಖ್ಯೆ ೫೭. ಇದರಲ್ಲಿ ಹರಿಜನ ಗಿರಿಜನ ಕೋಮಿಗೆ ಸೇರಿದವರು

೩ ಜನ ಇದ್ದಾರೆ. ಅಂದರೆ ೫ ಪರ್ಸೆಂಟ್ ಆಯಿತು. ಲೆಕ್ಚರರುಗಳ ಸಂಖ್ಯೆ ೨೫೧ ಇದರಲ್ಲಿ ೫ ಜನ ಹರಿಜನರು ಇದ್ದಾರೆ. ಸೂಪರಿಂಟೆಂಡೆಂಟುಗಳ ಸಂಖ್ಯೆ ; ೨೮ ಇದರಲ್ಲಿ ಒಬ್ಬರು ಮಾತ್ರ ಹರಿಜನರು ಇದ್ದಾರೆ. ಅಸಿಸ್ಟೆಂಟುಗಳ ೮೭ ಇದರಲ್ಲಿ ೬ ಜನ ಹರಿಜನರು ಇದ್ದಾರೆ. ಜೂನಿಯರ್ ಅಸಿಸ್ಟೆಂಟ್ ೧೨೨, ಹರಿಜನರು ೪ ಮಾತ್ರ ಇದ್ದಾರೆ. ಟೈಪಿಸ್ಟ್ ೩೩ ಜನ ಇದರಲ್ಲಿ ಒಬ್ಬರು ಮಾತ್ರ ಹರಿಜನರು ಇದ್ದಾರೆ. ಕ್ಲರ್ಕ್ ಕಂ ಟೈಪಿಸ್ಟ್ ೨೬, ಇದರಲ್ಲಿ ಎರಡು ಜನ ಎಸ್.ಟಿ. ಇದ್ದಾರೆ. ಅಟೆಂಡರ್ಸ್ ೧೧೫ ಜನ ಇದರಲ್ಲಿ ಕೇವಲ ೬ ಜನ ಹರಿಜನರು ಇದ್ದಾರೆ. ಇದಕ್ಕೆ ಯಾವ ಬಂದ್ಧಿವಂತಿಕೆ ಬೇಕು ? ಎಂ.ಎಸ್ಸಿ., ಪಿ.ಹೆಚ್.ಡಿ. ಸಂಸ್ಕೃತ ಪಂಡಿತರಿಗಾದರೆ, ಅರ್ಹತೆ ಬೇಕು. ಅಟೆಂಡರ್ಸ್ ಹುದ್ದೆಗೆ ಯಾವ ಡಿಗ್ರಿ ಬೇಕು ? ಯಾವ ಒಂದು ಮನೋಭಾವನೆಯಿಂದ ವಿಶ್ವವಿದ್ಯಾನಿಲಯಗಳು ಕೆಲಸ ಮಾಡುತ್ತಿದೆ, ಯಾವ ಮನೋಭಾವನೆಯಿಂದ ಉಪಕುಲಪತಿಗಳು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಇದಕ್ಕಿಂತಲೂ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರ್ ಸೈನ್ಸ್ ಕೇವಲ ಕೆಲವೇ ಜನರಾಂಗಕ್ಕೆ ಸೇರಿದ ಕೆಲವು ಜನರಿಗೆ ಮೀಸಲಾದಂತಿದೆ. ಸರ್ಕಾರ ಹಣ ಕೊಡುತ್ತಿದೆ, ಡೆವಲಪ್ ಮೆಂಟ್ ಈ ಗ್ರಾಂಟ್ ಕೊಡುತ್ತಿದೆ. ಇದು ಕೆಲವೇ ಜನರಿಗೆ ಕೆಲಸ ಕೊಡುವಂಥ ಎಂಪ್ಲಾಯಿಮೆಂಟ್ ಫ್ಯಾಕ್ಟರಿಯಾಗಿದೆ. ಆದು ಅವರಿಗೇ ಹೋಗಬೇಕು. ಬೇರೆಯವರಿಗೆ ಸಿಗುತ್ತಿಲ್ಲ. ಇದು ನಾನು ಕೊಟ್ಟಿಂತ ವರದಿಯಲ್ಲ. ಎಸ್.ಸಿ. ಎಸ್.ಟಿ. ಕಮಿಟಿಯವರು ಕೊಟ್ಟಂತ ರಿಪೋರ್ಟ್. ಇಲ್ಲಿ ಆಫೀಸರ್ ಗ್ರೇಡ್ ೧೭ ಹುದ್ದೆಗಳು ಇದ್ದು. ಒಬ್ಬರೂ ಎಸ್.ಸಿ. ಎಸ್.ಟಿ. ಇಲ್ಲ. ಪ್ರೊಫೆಸರ್ ೭೭ ಹುದ್ದೆಗಳು ಇದ್ದು, ಎಸ್.ಸಿ. ಎಸ್.ಟಿ. ಒಬ್ಬರೂ ಇಲ್ಲ. ಅಸೋಷಿಯೇಟೆಡ್ ಪ್ರೊಫೆಸರ್ಸ್ ೧೯೭ ಇದ್ದು, ಕೇವಲ ಇಬ್ಬರು ಮಾತ್ರ ಹರಿಜನರು ಇದ್ದಾರೆ. ಅದರೆ ೧ ಪರ್ಸೆಂಟ್. ಇನ್ಸ್ಟ್ರಕ್ಟರ್ಸ್ ೬೨೨ರಲ್ಲಿ ಕೇವಲ ೪ ಜನ ಹರಿಜನರು ಇದ್ದಾರೆ. ಸರ್ವೀಸ್ ಪ್ರೊಫೆಷನಲ್ ೨೨೮೬ ಹುದ್ದೆಗಳಿದ್ದು, ಕೇವಲ ೧೧೭ ಜನ ಹರಿಜನರು ಇದ್ದಾರೆ, ಅಂದರೆ ೫ ಪರ್ಸೆಂಟ್ ಮಾತ್ರ ತುಂಬಿದ್ದಾರೆ.

ಅಧ್ಯಕ್ಷರೆ, ಈ ರೀತಿಯಾಗಿ ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿಯೂ ಕೂಡ ಒಂದು ದೊಡ್ಡ ಅನ್ಯಾಯವಾಗಿದೆ. ಈಗತಾನೇ ಅವರು ಎಲ್ಲವನ್ನೂ ಫಾಲೋ ಮಾಡುತ್ತೇವೆ ಅದಕ್ಕೆ ಚಿಂತೆ ಮಾಡಬೇಡಿ ಎಂದು ಹೇಳಿದರು. ಮೊನ್ನೆ ತಾನೇ ಒಂದು ರಿಪೋರ್ಟ್ ಕೊಟ್ಟಿದ್ದಾರೆ, ಇದನ್ನು ಹೆಲ್ತ್ ಮಿನಿಸ್ಟರ್ ಓದಿರಬಹುದು ಎಂದು ಕಾಣುತ್ತದೆ. ಕರ್ನಾಟಕ ವಿಧಾನ ಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಡಾ. ತಿಪ್ಪೇಸ್ವಾಮಿ ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಇದು ೧೯೭೯-೮೦ರ ರಿಪೋರ್ಟ್, ಇದು ಏಳು ವರ್ಷಗಳ ಹಿಂದಿನ ರಿಪೋರ್ಟ್ ಎಂದು ಹೇಳಲಿಕ್ಕೆ ಆಗುವುದಿಲ್ಲ. ಇದು ಈ ವರ್ಷದ ರಿಪೋರ್ಟ್ ಈಗಲಾದರೂ ರೆಪ್ರಸೆಂಟೇಷನ್ ಹೆಚ್ಚಿನ ರೀತಿಯಲ್ಲಿ ಕೊಟ್ಟಿರಬಹುದೆಂದು ತಿಳಿದುಕೊಂಡು ರಿಪೋರ್ಟ್ ನೋಡಿದರೆ ಇದರಲ್ಲಿ ಹೆಚ್ಚಿನ ರೆಪ್ರಸೆಂಟೇಷನ್ ಕೊಟ್ಟಿರುವುದು ಕಂಡುಬರುತ್ತಿಲ್ಲ. ಇವೊತ್ತು ಹಂಗಾಮಿ ಶಿಕ್ಷಕರ ಬಗ್ಗೆ ತಕ್ಷಣ ಒಪ್ಪಿ, ಎಲ್ಲರಿಗೂ ರೆಗ್ಯುಲರೈಸ್ ಮಾಡಬೇಕೆಂಬ ಅನುಕಂಪ ವ್ಯಕ್ತ ಮಾಡುತ್ತಿದ್ದೀರಿ ಅದನ್ನು ಮಾಡಬೇಕು ಒಪ್ಪುತ್ತೇನೆ. ಆದರೆ ಅದೇ ಬೇರೆ ಸಮುದಾಯಕ್ಕೆ ಅನ್ಯಾಯವಾಗಿದ್ದರೆ ಅವರ ಬಗ್ಗೆ ತಮಗೆ ಅನುಕಂಪ ಇಲ್ಲ ಅವರ ಬಗ್ಗೆ ಕಳಕಳಿಯಿಂದ ಕೆಲಸ ಮಾಡಬೇಕು ಎನ್ನುವ ಭಾವನೆ ಇಲ್ಲ. ಮೊನ್ನೆ ತಾನೇ ರಿಪೋರ್ಟ್ ಕೊಟ್ಟಿದ್ದಾರೆ. ನನಗೆನಿಸಿದಮಟ್ಟಿಗೆ ಸೆಕೆಂಡ್ ವಿಪ್ರಿಲ್ ೧೯೮೭, ಇದು ಬಹಳ ಫ್ರೆಷ್ ರಿಪೋರ್ಟ್ ನಾಲ್ಕು ತಿಂಗಳ ಹಿಂದಿನ ರಿಪೋರ್ಟ್ ಇದರಲ್ಲಿ ವಿಶ್ವವಿದ್ಯಾನಿಲಯದಲ್ಲಿರತಕ್ಕ ಬೋಧಕ, ಬೋಧಕೇತರ ಆಡಳಿತ ತಾಂತ್ರಿಕ, ಮೇಲ್ವಿಚಾರಕ ಮತ್ತು ಕಾರ್ಮಿಕರುಗಳ ಒಟ್ಟು ೧೬೭೯, ಹುದ್ದೆಗಳು ಇವೆ. ಇದರಲ್ಲಿ ಪ್ರೊಫೆಸರ್ಸ್ ಇದ್ದಾರೆ. ಇವೊತ್ತಿನ ದಿವಸ ಬೆಂಗಳೂರು ಯೂನಿವರ್ಸಿಟಿಯಲ್ಲಿ ೬೧ ಜನ ಪ್ರೊಫೆಸರ್ಸ್ ಇದ್ದಾರೆ ಅದರಲ್ಲಿ ಎಸ್.ಸಿ. ಒಬ್ಬರೇ ಒಬ್ಬರು. ರೀಡರ್ಸ್ ೧೩೩ ಅದರಲ್ಲಿ ಎಸ್.ಸಿ. ಕೇವಲ ೩, ಎಸ್.ಟಿ. ನಿಲ್. ಪರ್ಸೆಂಟೇಜ್ ೩ ಲೆಕ್ಚರರ್ಸ್ ೨೭೩ ಅದರಲ್ಲಿ ೧೦ ಜನ ಎಸ್.ಸಿ. ಇದ್ದಾರೆ, ಎಸ್.ಟಿ. ೩ ಜನ ಇದ್ದಾರೆ. ಟೋಟಲ್ ಪರ್ಸೆಂಟೇಜ್ ೬ ೭, ಅನಂತರ ನಾನ್ ಟೀಚಿಂಗ್‌ನಲ್ಲಿ ೧೫ ಟೋಟಲ್ ಪೋಸ್ಟ್ ಅದರಲ್ಲಿ ಎಸ್.ಸಿ. ನಿಲ್, ಎಸ್ ಟಿ. ನಿಲ್. ಎರಡನೆಯ ದರ್ಜೆ ೧೭ ಪೋಸ್ಟ್ ಅದರಲ್ಲಿ ೧ ಎಸ್.ಸಿ. ೧ ಎಸ್.ಟಿ. ಕ್ಲಾಸ್ ತ್ರಿ ೪೭೫ ಔಟ್ ಆಫ್ ದಟ್ ೪೭ ಎಸ್.ಸಿ. ೧೦ ಎಸ್.ಟಿ. ಪರ್‌ಸೆಂಟೇಜ್ ೧೨.೧ ಫೋರ್ತ್ ಕ್ಲಾಸ್ ೫೬೮ ಔಟ್ ಆಫ್ ದಟ್ ೫೭ ಎಸ್.ಸಿ. ಒಟ್ಟು ೧೧.೯ ಪರ್‌ಸೆಂಟ್ ಅಂದರೆ ನೀವು ಯಾವುದೇ ಕ್ಯಾಟಗರಿಯಲ್ಲಿ ತೆಗೆದುಕೊಂಡರೂ

ಈ ಜನಾಂಗಕ್ಕೆ ಸರಿಯಾದಂಥ ಪ್ರಾತಿನಿಧ್ಯ ಕೊಟ್ಟಿಲ್ಲ. ಈಗ ತಾವು ಎಲ್ಲಿ ಫಾಲೋ ಆಪ್ ಮಾಡುತ್ತಿದ್ದೀರಾ ಎನ್ನುವುದನ್ನು ಹೇಳುತ್ತೀರಾ? ನಿಮಗೆ ಈ ಕ್ಲಾರ್ಕ್, ಆಟೆಂಡರ್ ಪೋಸ್ಟ್ ಹುದ್ದೆಗಳನ್ನು ತುಂಬಲಿಕ್ಕೆ ಆಗುವುದಿಲ್ಲವೇ, ಇವೊತ್ತು ಲೆಕ್ಚರರ್‌ಗೆ, ಪ್ರೊಫೆಸರ್‌ಗೆ ಪ್ರಮೋಷನ್ ಕೊಟ್ಟು ಕಳುಹಿಸುತ್ತೀರಿ. ಲೆಕ್ಚರರ್ಸ್‌ನಿಂದ ರೀಡರ್‌ಗೆ ಪ್ರಮೋಷನ್ ಕೊಡುತ್ತೀರಿ, ಅದಕ್ಕೆ ಎಕ್ಸ್‌ಪೀರಿಯೆನ್ಸ್ ಬೇಕು ಅಲ್ಲಿ ಪ್ರಮೋಷನ್ ಕೊಡುತ್ತೇವೆ ಎಂದು ಹೇಳಬಹುದು. ಈ ಖಾಲಿ ಇರತಕ್ಕ ವೇಕೆನ್ಸಿಗಳಿಗೆ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಲಿಕ್ಕೆ ತಮಗೆ ಇರತಕ್ಕ ತೊಂದರೆ ಏನು ? ರಿಟೈರ್ ಆದ ಜಾಗದಲ್ಲಿ ಬ್ಯಾಕ್‌ಲಾಗ್ ತುಂಬಲಿಕ್ಕೆ ಈ ಜನಾಂಗದವರನ್ನು ತುಂಬಲಿಕ್ಕೆ ನಿಮಗೆ ಏನು ಕಷ್ಟ ಇದೆ. ಏನಂ ತಾಪತ್ರಯ ಇದೆ ? ಒಟ್ಟಿನಲ್ಲಿ ನಿಮಗೆ ಮನಸ್ಸಿಲ್ಲ. ಈಗ ನಾನು ಹೇಳಿರುವುದು ಹಳೆಯ ಫಿಗರ್ಸ್ ಎಂದು ತಾವು ಹೇಳಲಿಕ್ಕೆ ಆಗುವುದಿಲ್ಲ. ಕೇವಲ ಏಪ್ರಿಲ್ ತಿಂಗಳ ಫಿಗರ್ಸ್ ನಾನು ಹೇಳಿದ್ದೇನೆ. ನಾನು ಇದೇ ಸದನದ ಸಮಿತಿ ಕೊಟ್ಟಂತಹ ಅಂಕಿಅಂಶಗಳನ್ನು ಹೇಳಿದ್ದೇನೆ. ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಇಲ್ಲೂ ಕೂಡ ನಮ್ಮ ಶಿಕ್ಷಕರ ಸಂಖ್ಯೆಯಲ್ಲಿ ಸೇರಿರತಕ್ಕವರು ಒಟ್ಟು ೪೦೮ ಜನ, ಇದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಕೇವಲ ೨೮ ಜನ. ಅಂದರೆ ೭ ಪರ್ಸೆಂಟ್ ಆಯಿತು. ಇನ್ನು ಶಿಕ್ಷಕೇತರರು (ನಾನ್ ಟೀಚಿಂಗ್ ಸ್ಟಾಫ್ ಒಟ್ಟು ೨೧೮ ಜನ, ಇದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ೪೫ ಜನ. ಅಂದರೆ ೯ ಪರ್ಸೆಂಟ್ ಇದೆ ಇನ್ನೂ ಅನೇಕ ಅಂಕಿ ಅಂಶಗಳು ನನ್ನಲ್ಲಿವೆ. ನಾನು ಅವುಗಳನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ತಮ್ಮ ಗಮನಕ್ಕೆ ನಾನು ಏತಕ್ಕೆ ತರುತ್ತಿದ್ದೇನೆಂದರೆ, ನಾವು ಇದೇ ದಾರಿಯಲ್ಲಿ ಮುಂದುವರಿದರೆ ಖಂಡಿತವಾಗಿಯೂ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಏನು ಪ್ರಾತಿನಿಧ್ಯವನ್ನು ಕೊಡಬೇಕೋ ಅದನ್ನು ಕೊಡುವುದಕ್ಕಾಗುವುದಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ನಾವು ಏನು ವಿಶ್ವವಿದ್ಯಾನಿಲಯಗಳಿಗೆ ಕೊಡುತ್ತಿದ್ದೇವೆ, ಯು.ಜಿ.ಸಿ.ನಿಂದ ಸಿಗುತ್ತಿದೆ ಅದು ಕೇವಲ ಕೆಲವೇ ಜನರಿಗೆ ರಿಸರ್ವ್ ಆಗಿ ಸಿಕ್ಕಿದಂತಾಗುತ್ತದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದರ ಅರ್ಥ ಇಷ್ಟೆ. ೩ ಮತ್ತು ೪ನೇ ದರ್ಜೆಯ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಸರಿಯಾಗಿ ಭರ್ತಿ ಮಾಡತಕ್ಕ ಶಕ್ತಿ ನಿಮಗಿಲ್ಲ. ಅಂದಮೇಲೆ ನಾವು ಈ ಮಾತನ್ನು ಯಾರಲ್ಲಿ ಹೇಳಿಕೊಳ್ಳಬೇಕು ? ಹಿಂದೆ ಮಾನ್ಯ ರಾಚಯ್ಯನವರು ಎಜುಕೇಷನ್ ಮಂತ್ರಿಗಳಾಗಿದ್ದಾಗಲೂ ಇದನ್ನು ಹೇಳಿದ್ದೆವು. ಅವರು ಹೋದಮೇಲೆ ಈಗ ಮಾನ್ಯ ಸೋಮಶೇಖರ್‌ರವರು ಬಂದಿದ್ದಾರೆ. ನಾನಾದರೂ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಈ ಬಗ್ಗೆ ನೀವು ಏತಕ್ಕೆ ಒಂದು ಸ್ಪೆಷಲ್ ರೂಲನ್ನು ತರಬಾರದು ? ಈಗಿರತಕ್ಕ ಪರಿಸ್ಥಿತಿಯಲ್ಲಿ ನೀವು ರೆಗ್ಯೂಲರೈಸ್ ಮಾಡುವುದಕ್ಕೆ ಹೋದರೆ ಯಾರ್ಯಾರು ಎಲ್ಲೆಲ್ಲಿರುತ್ತಾರೆ ಅಲ್ಲಲ್ಲೇ ರೆಗ್ಯೂಲರೈಸ್ ಆಗುತ್ತಾರೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಪ್ರಾತಿನಿಧ್ಯ ಎಲ್ಲಿ ಸಿಕ್ಕುತ್ತದೆ ? ಆದ್ದರಿಂದ ಈ ಬಗ್ಗೆ ಒಂದು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡುತ್ತೇವೆಂದು ನಮಗೆ ಆಶ್ವಾಸನೆ ಕೊಡಬೇಕು. ಇನ್ನು ೩ ತಿಂಗಳಲ್ಲಿ ನೀವು ಇದನ್ನು ಮಾಡಬೇಕು. ಹಿಂದೆ ನಾನು ಮಂತ್ರಿಯಾಗಿದ್ದಾಗ ಇದೇರೀತಿ ಸ್ಪೆಷಲ್ ರಿಕ್ರೂಟ್‌ಮೆಂಟನ್ನು ಮಾಡಿ ಕೇವಲ ೩ ತಿಂಗಳಲ್ಲಿ ೯೦೦೦ ಜನರನ್ನು ನೇಮಕ ಮಾಡಿ ೬೮ ಪರ್ಸೆಂಟ್ ರಿಸರ್ವೇಷನ್ ಕೋಟಾವನ್ನು ತುಂಬಿ ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್‌ನವರಿಗೆ ನೌಕರಿಯನ್ನು ಕೊಟ್ಟಿದ್ದೇವೆ. ಇಂಥ ಒಂದು ರೂಲನ್ನು ನೀವು ತರುವುದಕ್ಕಾಗುತ್ತದೆಯೇ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಲಿಕ್ಕೆ ಇಚ್ಛಿಸುತ್ತೇನೆ. ಇಲ್ಲೀಗಲ್ ಆದವುಗಳನ್ನು ಲೀಗಲ್ ಆಗಿ ಮಾಡಿಕೊಳ್ಳುವುದಕ್ಕೆ ಕಾನೂನನ್ನು ತರುತ್ತೀರಿ. ಆದರೆ ರೋಸ್ಟರ್ ಮೈನ್‌ಟೇನ್ ಮಾಡಲು ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ನಿಮಗೆ ಮನಸ್ಸಿಲ್ಲ. ನಿಮ್ಮ ಸರ್ಕಾರ ಬಂದು ನಾಲ್ಕೂವರೆ ವರ್ಷಗಳಾದುವು. ರಿಕ್ರೂಟ್‌ಮೆಂಟ್‌ನಲ್ಲಿ ಇಂಥ ಕೊರತೆ ಇದೆಯೆಂದು ೧೯೮೦ನೇ ಇಸವಿಯಲ್ಲೇ ರಿಪೋರ್ಟ್ ನಲ್ಲಿ ಸ್ಟ್ರಾಂಗ್ ಆಗಿ ಶಿಫಾರಸು ಮಾಡಿದ್ದಾರೆ. ಆದರೂ ಏನೂ ಪ್ರಯೋಜನವಾಗಿಲ್ಲ.

ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಈಸದನದ ಗಮನಕ್ಕೆ ಏತಕ್ಕೆ ತರುತ್ತಿದ್ದೇನೆಂದರೆ, ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗದಮೇಲೆ ಬಹಳ ಅನ್ಯಾಯವಾಗುತ್ತಿದೆ. ಇಡೀ ದೇಶದಲ್ಲಿರತಕ್ಕ ಜನರಲ್ಲಿ ಕರ್ನಾಟಕ ರಾಜ್ಯದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಬಹಳ ಅನುಕೂಲಗಳನ್ನು ಮಾಡಿಕೊಡುತ್ತಿದ್ದಾರೆ ಎನ್ನತಕ್ಕ ಭಾವನೆ ಇದೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಇದುವರೆಗೆ ಏನು ಅನುಕೂಲಗಳನ್ನು ಕೊಟ್ಟಿದೆ ಅದೇ ಅತಿಯಾಯಿತು, ಎನ್ನತಕ್ಕ

ಭಾವನೆ ಜನರ ಮನಸ್ಸಿನಲ್ಲಿ ಬಂದಿದೆ. ಯಾರಾದರೂ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಬಗ್ಗೆ ಮಾತನಾಡಿದರೆ ಮುಂಜಾನೆಯಿಂದ ಸಂಜೆಯವರೆಗೂ ಇದೇ ಏತಕ್ಕೆ ಮಾತನಾಡುತ್ತೀರಿ ಸಾಕು ಬಿಡಿ ಅಂತ ಅನ್ನುತ್ತಾರೆ. ಸ್ವಾಮಿ, ನಾನಾದರೂ ಕೇಳುತ್ತೇನೆ. ಅವರಿಗೆ ಏನು ಕೊಟ್ಟಿದ್ದೀರಿ. ಅವರಿಗಾಗಿ ಹೊಸ ಸ್ಕೀಮ್ಸ್‌ನ್ನು ಏನು ತೆಗೆದುಕೊಂಡಿದ್ದೀರಿ ? ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಪೈಕಿ ಪದವಿ ಪರೀಕ್ಷೆಯಲ್ಲಿ ಯಾರು ಅತಿ ಹೆಚ್ಚಿನ ಅಂಕಗಳನ್ನು ತೆಗೆದುಕೊಳ್ಳುತ್ತಾರೆ ಅವರನ್ನು ಕ್ಲಾಸ್ ಒನ್ ಹುದ್ದೆಗೆ ನೇರವಾಗಿ ನೇಮಕ ಮಾಡುತ್ತೇವೆಂದು ಹೇಳಿದಿರಿ. ಆದರೆ ಹಿಂದಿನ ಬಾಗಿಲಿನಿಂದ ಯಾರೋ ಒಬ್ಬರಿಗೆ ಹೇಳಿಕೊಟ್ಟು ಹೋಗಿ ರಿಟ್ ಹಾಕಿ ಎಂದು ತಿಳಿಸಿದಿರಿ. ಅದರ ಪ್ರಕಾರ ಯಾರೋ ಹೋಗಿ ರಿಟ್ ಫೈಲ್ ಮಾಡಿದರು. ಸ್ವಾಮಿ, ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಬಗ್ಗೆ ಕಳಕಳಿ ಇದ್ದರೆ, ಅಡ್ವೋಕೇಟ್ ಜನರಲ್‌ನವರನ್ನು ಕರೆಸಿ ಈ ಸ್ಕೀಮ್ ಏನಿದೆ ಇದನ್ನು ಇಷ್ಟು ದಿವಸದಲ್ಲಿ ವೆಕೇಟ್ ಮಾಡಿಸಬೇಕೆಂದು ಹೇಳುತ್ತೀರಾ ? ಅದು ಆಗುವುದಿಲ್ಲ. ಏಕೆಂದರೆ ಚೀಫ್ ಜಸ್ಟೀಸ್ ಮೇಲೆ. ಹೈಕೋರ್ಟ್ ಜಡ್ಜಸ್ ಮೇಲೆ ಒತ್ತಡವನ್ನು ತರುವುದಕ್ಕಾಗುವುದಿಲ್ಲ ಎಂದು ಹೇಳುತ್ತೀರಿ. ಅಡ್ವೋಕೇಟ್ ಜನರಲ್ಲನ್ನು ರಿಕ್ವೆಸ್ಟ್ ಮಾಡಿಕೊಂಡು ಈ ಬಗ್ಗೆ ಒಂದು ಪಿಟಿಷನ್ ಫೈಲ್ ಮಾಡಿಸಿ ಕೇಸನ್ನು ಅಡ್ವಾನ್ಸ್ ಮಾಡಿ ಎಂದು ಹೇಳಿ. ಆದರೆ ಇದನ್ನು ಮಾಡುವುದಕ್ಕೆ ನಿಮಗೆ ಮನಸ್ಸಿಲ್ಲ. ಇದನ್ನು ಹೇಳುವುದಕ್ಕೆ ನಿಮಗೆ ತಾಕತ್ತಿಲ್ಲ. ಹುಚ್ಚಿ ಲಗ್ನದಲ್ಲಿ ಉಂಡವನೇ ಜಾಣ.....

ಅಧ್ಯಕ್ಷರು.—ಹುಚ್ಚು ಮುಂಡೆ ಮದುವೇಲಿ ಉಂಡವನೇ ಜಾಣ ಅಂತ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಮಗೆ ಈ ಗಾದೆ ಮಾತು ಚೆನ್ನಾಗಿ ಗೊತ್ತಿದೆ. ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ. ಏಕೆಂದರೆ ಅವಳ ಮದುವೆಯಲ್ಲಿ ಊಟಕ್ಕೆ ಬಡಿಸುವವರು ಯಾರೂ ಇರುವುದಿಲ್ಲ. ಇದೇರೀತಿ ನಮ್ಮ ಸರ್ಕಾರದಲ್ಲೂ ಆಗಿದೆ. ಈ ಸರ್ಕಾರದಲ್ಲಿ ಯಾರು ಒಲಶಾಲಿಯಾಗಿರುತ್ತಾನೆ ಅವನು ಅನುಕೂಲ ಮಾಡಿಕೊಳ್ಳುತ್ತಾನೆ.

ಟಿ.ಪಿ.ಒ. ಎಂ.

ಅದಕ್ಕೆ ಯಾವ ಕಾನೂನು ಇಲ್ಲ. ನಾವು ಏನಾದರೂ ಹೇಳಿದರೆ ಕವಿಯಲ್ಲಿ ಹೋಗುವುದಿಲ್ಲ. ನಿಮಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಶಕ್ತಿ ಇಲ್ಲ. ಛಲ ಇಲ್ಲ ಕಾನೂನು ಇವತ್ತು ವೆಸ್ಟೆಡ್ ಇಂಟರೆಸ್ಟ್ ಜನರ ಕೈಯಲ್ಲಿ ಸಿಕ್ಕಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಮನಸ್ಸು ನಿಮಗೆ ಇದ್ದರೆ ಖಂಡಿತವಾಗಿಯೂ ಇಂಪ್ಲಿಮೆಂಟ್ ಮಾಡುತ್ತಿದ್ದೀರಿ. ಇದು ಡಾ. ತಿಪ್ಪೆಸ್ವಾಮಿಯವರ ರಿಪೋರ್ಟ್ ಇದನ್ನು ಏಪ್ರಿಲ್ ತಿಂಗಳಲ್ಲಿ ಕೊಟ್ಟಂಥ ರಿಪೋರ್ಟ್.

ಶ್ರೀ ಎಂ. ರಘುಪತಿ. — ವಿಶ್ವವಿದ್ಯಾನಿಲಯದ ಕಾನೂನಿನಲ್ಲಿ ತಿದ್ದುಪಡಿ ಮಾಡಿ ಸ್ಪೆಷಲ್ ಕ್ಲಾಸ್ ಆಳವಡಿಸಿದ್ದೇವೆ. ನಿಮ್ಮ ಸಲಹೆಯ ಮೇರೆಗೆ, ಅದರಲ್ಲಿ ಏನೆಂದರೆ ಟೈಮ್ ಟು ಟೈಮ್ ರೆವ್ಯೂ ಮಾಡಬೇಕು, ಬ್ಯಾಕ್‌ಲಾಗ್ ಫಿಲಪ್ ಮಾಡಬೇಕು, ಬ್ಯಾಕ್‌ಲಾಗ್ ಫಿಲಪ್ ಆಗುವವರೆಗೂ ಬೇರೆ ಯಾರನ್ನು ರಿಕ್ರೂಟ್‌ಮೆಂಟ್ ಮಾಡಬಾರದೆಂದು ಹೇಳಿದ್ದಾರೆ.

SRI MALLIKARJUNA M. KHARGE.— This is the latest report of the SCs/STs Welfare Committee, headed by Dr. Thippeswamy, It has been submitted 4 months back.

SRI M. RAGHUPATHY.— Last year we brought it when we passed the University Amendment Bill.

MR. SPEAKER.— It is a very important report. You read it.

ಶ್ರೀ ಎಂ. ರಘುಪತಿ — ಆರ್ಮುಗಮ್ ರಿಪೋರ್ಟ್ ಇದೆ. ಅದು ಹಳೆಯ ರಿಪೋರ್ಟ್. ಅದರಲ್ಲಿ ಅನ್ಯಾಯವಾಗಿದೆ. ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗದವರಿಗೆ ಅನ್ಯಾಯವಾಗಿದೆ ಎಂದು ನಾನೇ ಒಪ್ಪಿಕೊಂಡಿದ್ದೇನೆ. ಅದರಲ್ಲಿ ಏನು ಮುಚ್ಚುಮರೆ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ನಾನು ಏನು ಹೇಳುತ್ತಿದ್ದೇನೆಂದರೆ, ಈಗ ಮಾಡುವುದಿಲ್ಲವೆಂದು ಗೊತ್ತಾದ ಮೇಲೆ ಪಾಪ ಅವರ ಮನೆಯವರಿಗೆ ತೊಂದರೆಯಾಗುತ್ತದೆ ಎಂದು ಮಾನವೀಯತೆಯ ದೃಷ್ಟಿಯಿಂದ ತಂದಿರಬಹುದು. ಹಾಗೆಯೇ ಬೇರೆಯವರ ಮೇಲೆ ಏತಕ್ಕೆ ಅನುಕಂಪವಿಲ್ಲ ? ಕಾನ್‌ಸ್ಟಿಟ್ಯೂಷನ್‌ನಲ್ಲಿಯೇ ಪ್ರಾವಿಷನ್ ಮಾಡಿದೆ. ಅದನ್ನು ಫುಲ್‌ಫಿಲ್ ಮಾಡಲು ಎಲಿಜಬಲ್ ಕ್ಯಾಂಡಿಡೇಟ್ಸ್ ಸಿಕ್ಕಲಿಲ್ಲವೇ ? ಅಟೆಂಡರ್ ಪೋಸ್ಟ್‌ಗಳಿಗೂ ಷೆಡ್ಯೂಲ್ಡ್‌ಕ್ಯಾಸ್ಟ್ ಷೆಡ್ಯೂಲ್‌ಟ್ರೈಬ್ಸ್ ಕ್ಯಾಂಡಿಡೇಟ್ಸ್ ಸಿಕ್ಕಲಿಲ್ಲವೇ ? I will read the recommendations of the Committee, which says thus: "The University should have taken action to give more representation to SCs/STs in these appointments Even in Class IV appointments the required percentage is not given to SCs/STs. The committee regrets that the universiry has not cared to follow the reservation order strictly and ignored the claims of SCs/STs."

ಶ್ರೀ ಎಂ. ರಘುಪತಿ.— ಯೂನಿವರ್ಸಿಟಿಯಲ್ಲಿ ತುಂಬ ಅನ್ಯಾಯವಾಗಿದೆ. ಎಷ್ಟು ಅನ್ಯಾಯ ಮಾಡಿದ್ದಾರೆಂದರೆ ಷೆಡ್ಯೂಲ್‌ಕ್ಯಾಸ್ಟ್ ಷೆಡ್ಯೂಲ್‌ಟ್ರೈಬ್ಸ್‌ನವರಿಗೆ ಏನು ಕೋಟ ಸಿಗಬೇಕೋ ಅದನ್ನು ಭರ್ತಿ ಮಾಡದೆ ದಮನ ಮಾಡಿ ತಮಗೆ ಬೇಕಾದವರಿಗೆ ಅಪಾಯಿಂಟ್ ಮಾಡಿಕೊಂಡಿದ್ದಾರೆ.

SRI M. S. KRISHNAN.— They have made scathing indictment. What the Government has done.

ಅಧ್ಯಕ್ಷರು.— ಅನ್ಯಾಯ ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅವರನ್ನು ಹಾಗೆಯೇ ಬಿಟ್ಟಿರುವುದರಿಂದ ಅವರು ಈ ರೀತಿ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಎಂ. ರಘುಪತಿ.— ಯೂನಿವರ್ಸಿಟಿ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ತಂದಿದ್ದೇವೆ. ಇದೆ ತರುವುದು ಬಹಳ ಲೇಟ್ ಆಗಿ ಹೋಯಿತು. ಅನ್ಯಾಯವಾದ ಮೇಲೆ ತಂದಿದ್ದೇವೆಂದು ಒಪ್ಪಿಕೊಳ್ಳುತ್ತೇನೆ. ಈಗ ಇದರಲ್ಲಿ ರೆಮೆಡಿ ಇದೆ. ಇಂಪ್ಲಿಮೆಂಟ್ ಮಾಡಬೇಕು.

ಅಧ್ಯಕ್ಷರು.— ರೆಮಿಡಿ ಹೇಗೆಂಬ ಕ್ರಮ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅದಕ್ಕೆ ಫರ್ದರ್ ರೆಕಮೆಂಡೇಷನ್ ಏನು ಮಾಡಿದರು ಎಂದರೆ ಪೇಜ್ ೩೪ರಲ್ಲಿ, which says thus :

> "The Committee strongly recommends that immediate steps should be taken by the universities to fill the shortfall of SCs/STs in various categories of posts in the Universities and steps should also be taken to special and adhoc recruitment to achieve this purpose. if necessary by resorting to special recruitment only for SCs/STs in order the achieve the prescribed equality at an early date. As regards, qualification prescribed for higher posts like professors and readers etc., relaxation should be made in respect of SCs/STs so that more number of persons from these communities are required to be filled up to these posts."

ಇದೇ ಸಲಹೆಯನ್ನು ಏತಕ್ಕಾಗಿ ಇಂಪ್ಲಿಮೆಂಟ್ ಮಾಡಲಿಲ್ಲ? ಅದನ್ನು ಮಾಡುವುದಕ್ಕೆ ಳ ವರ್ಷ ಬೇಕೇ ಎಂದು ಕೇಳುತ್ತೇನೆ. ದಯವಿಟ್ಟು ಈ ರಿಪೋರ್ಟ್ ಪ್ರಕಾರ ತಾವು ಸ್ಪೆಶಲ್ ರೆಕ್ರೂಟ್‌ಮೆಂಟ್ ಕಮಿಟಿ ಮಾಡಬೇಕು. ಅದನ್ನು ತಾವು ನೋಡಬೇಕಾಗುತ್ತದೆ. ಡಿಪಿಆರ್.ಗೆ ಕಳುಹಿಸುವುದೂ, ಲಾ ಡಿಪಾರ್ಟ್‌ಮೆಂಟಿಗೆ ಕಳುಹಿಸುವುದು ಇದಕ್ಕೆಲ್ಲ ಬಹಳಷ್ಟು ಟೈಂಹಿಡಿಯುತ್ತದೆ. ಅದಕ್ಕೋಸ್ಕರ ಒಂದು ಮೀಟಿಂಗ್ ಅನ್ನು ಕನವೇ ಮಾಡಿ, ಅದರಲ್ಲಿ ಲಾ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳು,

ಡಿಪಿಎಆರ್‌ನವರು, ಅಡ್ವೊಕೇಟ್ ಜನರಲ್ ಇವರನ್ನೆಲ್ಲ ಸೇರಿಸಿ ಸ್ಪೆಶಲ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ೩ ದಿನಗಳಲ್ಲಿ ಮಾಡಬಹುದೆಂದು ಹೇಳಿದೆ. ೧೫ ದಿನಗಳಲ್ಲಿ ರೂಲ್ಸ್ ಫ್ರೇಂ ಮಾಡುವುದಕ್ಕಾಗುತ್ತದೆ. ತರಾತುರಿಯಾಗಿ ಬಿಲ್‌ಗಳನ್ನು ತರುವುದಕ್ಕಾಗುತ್ತದೆ. ಲ್ಯಾಂಡ್ ರೆವಿನ್ಯೂ ಬಿಲ್ ತರುವಾಗ ಅಲ್ಲಿ ಇಲ್ಲಿ ಹೋಗಿ ೯ ಮೀಟಿಂಗ್‌ಗಳಲ್ಲಿ ಮುಗಿಸಿದ್ದೀರಿ. ಬಾಟ್ಲಿಂಗ್ ರೂಲ್ಸ್ ೧೫ ದಿನಗಳಲ್ಲಿ ಆಯಿತು.

ಅಧ್ಯಕ್ಷರು.— ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮಾಡಿ ಎಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಮನಸ್ಸು ಇದ್ದರೆ ೧೫ ದಿನಗಳಲ್ಲಿ ಮಾಡಬಹುದು. ಮುಂಖ್ಯಮಂತ್ರಿಗಳಿಗೆ ಮತ್ತು ಇವರಿಗೆ ಅವರ ಬಗ್ಗೆ ಕಳಕಳಿ ಇದ್ದರೆ ಮಾಡಬಹುದು. ಇಲ್ಲದಿದ್ದರೆ ಬರೀ ನಾವು ಹೇಳುವುದು, ಭಾಷಣ ಮಾಡುವುದು ಅಷ್ಟೇ ಆಗುತ್ತದೆ. ದಯವಿಟ್ಟು ಮುಂದೆ ಯಾವುದೇ ವೇಕೆನ್ಸಿ ಬಂದರೂ ಅದನ್ನು ಅಕ್ಕಮಡೇಟ್ ಮಾಡಿ ಸ್ಪೆಶಲ್ ರೆಕ್ರೂಟ್‌ಮೆಂಟ್ ಮಾಡಿ. ನಮ್ಮ ರಾಜ್ಯದಲ್ಲಿ ೫-೬ ವಿಶ್ವವಿದ್ಯಾನಿಲಯಗಳು ಇವೆ. ಅವುಗಳಲ್ಲಿರತಕ್ಕ ಎಲ್ಲಾ ವೇಕೆನ್ಸಿಗಳನ್ನು ಕ್ಲಬ್ ಮಾಡಿ ಡೈರೆಕ್ಟ್ ಆಗಿ ಕಾಲ್‌ಫಾರ್ ಮಾಡಿ. ಪಿ.ಎಸ್.ಸಿ.ಯವರಿಗೆ ಹೇಳಿ. ಲೋಕೋಪಯೋಗಿ ಇಲಾಖೆಯಲ್ಲಿ ಮಾಡಿದ ಹಾಗೆ ಮಾಡಬೇಡಿ. ಡೈರೆಕ್ಟ್ ಆಗಿ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳನ್ನು ನೇಮಕ ಮಾಡುತ್ತೇವೆಂದು ನೋಟಿಫಿಕೇಷನ್ ಮಾಡಿ ಹೈಕೋರ್ಟಿಗೆ ಹೋಗಿ ಸ್ಟೇ ತಂದರು. ಹೀಗಾಗಿ ೩ ವರ್ಷ ಕಳೆಯಿತು.

ಅಧ್ಯಕ್ಷರು.— ಎಸ್.ಸಿ.ಎಸ್.ಟಿ. ಕಮಿಟಿಯಂವರು ಪರದಿ ಕೊಟ್ಟ ಮೇಲೆ ಅದು ಇಂಪ್ಲಿಮೆಂಟ್ ಆಯಿತೇ ಇಲ್ಲವೇ ಎಂಬುದನ್ನು ಆ ಸಮಿತಿಯ ಅಧ್ಯಕ್ಷರು ನೋಡಬೇಕು. ಮಾನ್ಯ ಕೊಟ್ರಪ್ಪನವರೇ, ನೀವು ಕೂಡ ಮಂತ್ರಿಗಳು ಭರವಸೆ ಕೊಟ್ಟಿದ್ದರ ಬಗ್ಗೆ ಜವಾಬ್ದಾರಿ ವಹಿಸಬೇಕು. ನಿಮ್ಮ ನಿಮ್ಮ ಕಮಿಟಿಯ ರೆಕಮಂಡೇಷನ್ ಏನಾಗಿದೆ ಎಂದು ಎಲ್ಲಾ ಕಮಿಟಿಯ ಅಧ್ಯಕ್ಷರುಗಳು ನೋಡಬೇಕು. ನಿಮ್ಮಿಂದ ಹೆಚ್ಚಿನ ಜವಾಬ್ದಾರಿ ಇದೆ ಮಾನ್ಯ ರಮೇಶ್‌ಕುಮಾರ್ ಅವರೇ.

ಶ್ರೀ ರಮೇಶ್‌ಕುಮಾರ್.— ನಾವು ರಿಪೋರ್ಟ್ ಕೊಟ್ಟಾಗಿದೆ, ಅವರು ಕೆಲಸ ಮುಂದುವರಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇವರಿಗೆ ಅನೇಕ ರೆಕ್ರೂಟ್‌ಮೆಂಟ್‌ಗಳಲ್ಲಿ ಸರಿಯಾದ ರೆಪ್ರಸಂಟೇಷನ್ ಇಲ್ಲವೆಂದು ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಎಂದು ಡಿಮ್ಯಾಂಡ್ ಮಾಡುತ್ತೇವೆ. ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ಮಾಡಲೇಬೇಕು. ಇದನ್ನು ಹೋದ ಸಾರಿಯೇ ನಾನು ಪಾಯಿಂಟ್ ಔಟ್ ಮಾಡಿದ್ದೆ. ಆದರಲ್ಲಿ ಎಲ್ಲಾ ಜನತೆಗೆ ರೆಪ್ರಸಂಟೇಷನ್ ಇದೆ. ಆದರೆ ಹಿಡ್ಕೂಲ್ಡ್ ಕ್ಯಾಸ್ಟ್‌ನವರಿಗೆ ಮಾತ್ರ ಬಿಟ್ಟು ಹೋಗಿದೆ. ಮಾನ್ಯ ಮಂತ್ರಿಗಳು ಹೇಳಿದ್ದರು, ಮುಂದಿನ ಅಧಿವೇಶನದಲ್ಲಿ ಅದನ್ನು ತರುತ್ತೇವೆ ಎಂದು. ಆದರೆ ಇದುವರೆಗೆ ಪತ್ತೆಯೇ ಇಲ್ಲ.

ಅಧ್ಯಕ್ಷರು.— ಮಾನ್ಯ ದೇಶಪಾಂಡೆಯವರೇ, ನಿಮಗೆ ಸಂಬಂಧಪಟ್ಟದ್ದನ್ನು ಹೇಳಂತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹೋದಸಾರಿ ಮಾನ್ಯ ಬಸವರಾಜ್ ಅನ್ವರಿಯವರು ಮಂತ್ರಿಗಳಾಗಿದ್ದಾಗ ಅವರು ತಂದ ಮಸೂದೆಯನ್ನು ವಿರೋಧ ಮಾಡಿದ್ದೆ. ಬೋರ್ಡ್ ಆಫ್ ರೀಜಂಟ್‌ನಲ್ಲಿ ಹಿಡ್ಕೂಲ್ಡ್ ಕ್ಯಾಸ್ಟಿಗೆ ಪ್ರಾತಿನಿಧ್ಯ ಇಲ್ಲ. ಆದ್ದರಿಂದ ರೆಕ್ರೂಟ್‌ಮೆಂಟ್‌ನಲ್ಲಿ ತೊಂದರೆಯಾಗುತ್ತದೆ. ಅಲ್ಲಿ ಏನು ರೆಕ್ರೂಟ್ ಮಾಡುತ್ತಾರೆ ಆದೆಲ್ಲ ಬೋರ್ಡ್ ಆಫ್ ರೀಜಂಟ್ ಮುಂದೆ ಬರುತ್ತದೆ. ಅವರ ಬಗ್ಗೆ ಆಸಕ್ತಿ ಇರುವ ರೆಪ್ರಸಂಟೇಷನ್ ಇರಲಿಲ್ಲವೆಂದರೆ ಉಪಯೋಗವಾಗುವುದಿಲ್ಲ ಅದಕ್ಕೆ ಮುಂದಿನ ಅಧಿವೇಶನದಲ್ಲಿ ವ್ಯವಸ್ಥೆ ಮಾಡುತ್ತೇವೆಂದು ಮಂತ್ರಿಗಳು ಹೇಳಿದ್ದರು. ಬೇರೆ ಎಲ್ಲಾ ಮಸೂದೆಗಳು ಬಂದವು, ಅದು ಮಾತ್ರ ಬರಲಿಲ್ಲ. ಹೀಗೆ ಅವರು ಭರವಸೆ ಕೊಡುವುದು, ಮರೆಯುವುದು ಆಗಿದೆ. ಈ ರೀತಿಯಾಗಬಾರದು.

ಅಧ್ಯಕ್ಷರು.— ಅಷ್ಯೂರೆನ್ಸ್ ಕಮಿಟಿ ಛೇರ್ಮನರೇ, ಸ್ವಲ್ಪ ಕೇಳುತ್ತಾ ಇರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದು ಏನೆಂದರೆ, ಹಿಂದೆ ಏನು ಒಂದು ಭರವಸೆಯನ್ನು ಇದೇ ಸದನದಲ್ಲಿ ಕೊಟ್ಟಿದ್ದರು, ಅದನ್ನು ಜಾಗ್ರತೆ ಕಾರ್ಯರೂಪಕ್ಕೆ ತರಬೇಕು ಮತ್ತು ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ಮಾಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.— ಬಿಲ್ ಪಾಸ್ ಆಗಿದೆ. ಆದರೆ ಅದಕ್ಕೆ ಅಸೆಂಟ್ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ — ಇನ್ನೊಂದು ತಿದ್ದುಪಡಿಯನ್ನು ತರುವುದಕ್ಕೆ ಏನು ತೊಂದರೆ ಇದೆ ? ದಯವಿಟ್ಟು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ ಇದೇರೀತಿ ರೆಗ್ಯುಲರೈಸ್ ಮಾಡುತ್ತಾ ಹೋದರೆ ತೊಂದರೆಯಾಗುತ್ತದೆ. ಆದೇರೀತಿ ಯೂನಿವರ್ಸಿಟಿ ಆಫ್ ಆಗ್ರಿಕಲ್ಚರ್ ಸೈನ್ಸಸ್‌ಗೆ ಸಂಬಂಧಪಟ್ಟಂತೆಯೂ ತಿದ್ದುಪಡಿ ತರಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER.— Thank you. You have brought so many things to the knowledge of the House.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವುದು ೧೦೦ಕ್ಕೆ ೧೦೦ ರಷ್ಟು ಒಪ್ಪಿಕೊಳ್ಳುವ ವಿಷಯ. ಪೂರ್ತಿಯಾಗಿ ನಾನು ಆದನ್ನು ಬೆಂಬಲಿಸುತ್ತೇನೆ. ಒಂದೇ ಒಂದು ಅಂಶ ಎಂದರೆ ಹಂಗಾಮಿ ಉಪನ್ಯಾಸಕರನ್ನು ಪರ್ಮನೆಂಟ್ ಮಾಡಬೇಕೆಂದು ಮಾಡಿದ್ದೀರಿ. ಇದು ಬಹಳ ಒಳ್ಳೆಯದು. ಇದರಲ್ಲಿ ಕರಾರು ಆಧಾರದ ಮೇಲೆ ಇರುವವರನ್ನು ಮತ್ತು ಹೊರಸೇವೆ ಮೇಲಿರುವವರನ್ನು ಬಿಟ್ಟಿದ್ದೀರಿ. ನಾನು ತಮಗೆ ಕೇಳುವುದು ಇಷ್ಟೆ. ಕರಾರು ಆಧಾರದ ಮೇಲಿರುವವರನ್ನು ಬಿಟ್ಟಿರುವುದಕ್ಕೆ ಕಾರಣ ಏನು ? ನಿನ್ನೆ ದಿವಸ ಒಂದು ಚರ್ಚೆಯಾಯಿತು. ತಾವೆಲ್ಲರೂ ಆ ಬಗ್ಗೆ ಒಂದು ಅಭಿಪ್ರಾಯವನ್ನು ಇವರ ಬಗ್ಗೆ ವ್ಯಕ್ತಪಡಿಸಿದ್ದೀರಿ. ಆ ಅಭಿಪ್ರಾಯವನ್ನು ಕಾನೂನು ರೀತ್ಯ ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಯೋಚನೆ ಮಾಡಿ. ಮೊದಲೇ ಇವರ ಬಗ್ಗೆಯೂ ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು ಎಂದು ನನಗನ್ನಿಸುತ್ತದೆ. ಆದರ ಬಗ್ಗೆ ಏನೂ ಹೇಳಲಿಲ್ಲ. ಇವರೂ ಸಹ ಸುಮಾರು ಜನ ಇದ್ದಾರೆ ಎಂದು ನಮಗೆ ಗೊತ್ತಿದೆ. ಸುಪ್ರೀಂ ಕೋರ್ಟಿಗೂ ಹೋಗಿದ್ದಾರೆ ಎಂಬುದೂ ಗೊತ್ತು. ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕಾಗುತ್ತದೆ. ಹೊರಸೇವೆಯಲ್ಲಿ ಇರುವವರು ಮತ್ತು ಸಂಬಂಧಪಟ್ಟ ವಿಶ್ವವಿದ್ಯಾನಿಲಯದಲ್ಲಿ ಪ್ರತಿಯೋಜನೆ ಮೇಲೆ ನೇಮಕಗೊಂಡ ಉಪನ್ಯಾಸಕರು ಎಂದು ಎರಡು ಕ್ಯಾಟಗರಿ ಇದೆ. ಹೊರಸೇವೆ ಎಂದರೆ ನಾನು ತಿಳಿದುಕೊಂಡಿರುವುದು ಬೇರೆ ಕಡೆಯಿಂದ ಇಲ್ಲಿಗೆ ಬಂದವರು ಎಂದು ಅರ್ಥ ಅಲ್ಲ. ಇಲ್ಲಿಂದ ಬೇರೆ ಕಡೆ ಲೆಂಟ್ ಸರ್ವೀಸ್ ಮೇಲೆ ಹೋಗಿರುವವರು ಎಂದು ನಾನು ತಿಳಿದುಕೊಂಡಿದ್ದೇನೆ. ಬೇರೆ ಕಡೆ ಹೋಗಿರುವವರು ಟೆಂಪೊರರಿ ಇರಬಹುದು, ಪರ್ಮನೆಂಟ್ ಇರಬಹುದು. ಮುಕ್ಕಾಲು ಭಾಗವೆಲ್ಲಾ ಪರ್ಮನೆಂಟಾಗಿಯೇ ಇರುತ್ತಾರೆ. ಪರ್ಮನೆಂಟ್ ಆಗಿರುವವರಾದರೆ ಪ್ರಶ್ನೆಯೇ ಬರುವುದಿಲ್ಲ. ಇದರಲ್ಲಿ ಸೇರಿಸಬೇಕಾದ ಪ್ರಮೇಯ ಇರುವುದಿಲ್ಲ. ಆದರೆ ಟೆಂಪೊರರಿಯಾಗಿದ್ದರೆ ಏತಕ್ಕೆ ಸೇರಿಸಕೂಡದು ಗೊತ್ತಾಗುತ್ತಿಲ್ಲ. ಅವರೂ ಕೂಡ ಶಿಕ್ಷಕರಾಗಿರುವುದರಿಂದ ಅವರನ್ನು ಏತಕ್ಕೆ ಬಿಟ್ಟಿದ್ದೀರಿ ? Persons who are on deputation, if they are temporary, then, they are also entitled to be made permanent. If he is permanent in the parent department and if he is on lent service, you need not mention it. This leads to doubt and it should be clarified. If they i.e., those who are on deputation are temporary employees, then, they are also entitled to be made permanent. ಆದನ್ನು ಸೇಫ್‌ಗಾರ್ಡ್ ಮಾಡುವ ಬಗ್ಗೆ ಹೇಳಬೇಕು. ಇನ್ನೊಂದು, ಸಂಬಂಧಪಟ್ಟ ವಿಶ್ವವಿದ್ಯಾನಿಲಯದಲ್ಲಿ ಪ್ರತಿಯೋಜನೆ ಮೇಲೆ ನೇಮಕವಾಗಿರುವ ಉಪನ್ಯಾಸಕರು ಎಂದು ಹೇಳಿದ್ದಾರೆ. ಈ ಕನ್ನಡ ಪದಗಳನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ.

ಶ್ರೀ ಎಂ. ರಘುಪತಿ.— ಇಂಗ್ಲೀಷಿನಲ್ಲೇ ಓದಿ. ನಾರಾಯಣಕಂಮಾರ್ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಇಂಗ್ಲೀಷ್ ಪ್ರತಿ ಇಲ್ಲ. I must take some lessons in Kannada. ಪ್ರತಿಯೋಜನೆ ಮೇಲೆ ನೇಮಕವಾಗಿರುವ ಉಪನ್ಯಾಸಕರು ಎಂದು ಹೇಳಿದರೆ ಏನು ? ಇದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮಿಂದ ಈ ಬಗ್ಗೆ ನಾನು ಸ್ವಲ್ಪ ತಿಳಿದುಕೊಳ್ಳಬೇಕಾಗಿದೆ. ಯೂನಿವರ್ಸಿಟಿಯಲ್ಲಿ ಇನ್ನೊಂದು ಯೋಜನೆ ಇದ್ದರೆ ಅದರಲ್ಲಿ ನೇಮಕವಾದ ಉಪನ್ಯಾಸಕರು ಎಂದಿರಬಹುದು. ಅದರಲ್ಲಿ ಟೆಂಪೊರರಿಯಾಗಿದ್ದರೆ ಅವರನ್ನು ಪರ್ಮನೆಂಟ್ ಮಾಡಬೇಕಾಗುತ್ತದೆ. ಇದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

I got the English Copy. It reads ;

> "...on foreign" service and serving the University concerned on deputation but shall not include Lecturers appointed on contract basis or on those in foreign service and serving the University concerned on deputation..."

That means, there are three categories- (i) thos. who are absolutely temporary. (ii) on contract basis (iii) those who are in foreign service & on, deputation. ಫಾರಿನ್ ಸರ್ವೀಸ್ ಆದರೆ ಬೇರೆ ರಾಜ್ಯಗಳಲ್ಲಿ ಫಾರಿನ್ ಸರ್ವೀಸ್‌ನಲ್ಲಿ ಇರಬಹುದು. ಬೇರೆ ರಾಷ್ಟ್ರದಲ್ಲಿ ಫಾರಿನ್ ಸರ್ವೀಸ್‌ನಲ್ಲೀರಬಹುದು. ದೆಹಲಿಯಲ್ಲಿ ಹೋಗಿರಬಹುದು ಇದೆಲ್ಲಾ ಫಾರಿನ್ ಸರ್ವೀಸ್ ಆಗುತ್ತದೆ. ಇಂತಹವರು ಮುಕ್ಕಾಲು ಭಾಗ ಪರ್ಮನೆಂಟ್ ಆಗಿರುತ್ತಾರೆ. ಟೆಂಪರರಿಯಾಗಿ ಇರುವುದಕ್ಕೆ ಸಾಧ್ಯವೇ ಇಲ್ಲ. ಅವರು ಟೆಂಪರರಿಯಾಗಿ ಇಲ್ಲದಿದ್ದರೆ there is no necessity of mentioning it here. ಅಂತಹವರು ಟೆಂಪರರಿಯಾಗಿದ್ದರೆ ಅಂತಹವರನ್ನು ಪರ್ಮನೆಂಟ್ ಮಾಡುವುದಕ್ಕಾಗಿಯೇ ಇದಲ್ಲ. ಆ ಒಂದು ಪ್ರಶ್ನೆ ಕೂಡ ಬರುತ್ತದೆ. ಅದರ ಮಟ್ಟಿಗೆ ಸ್ಪಷ್ಟತೆ ಇರಬೇಕು. ಮೂಲಭೂತವಾಗಿ ಮಾನ್ಯ ಖರ್ಗೆಯವರು ಹೇಳಿದ ವಿಚಾರವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಅದನ್ನು ಸರಕಾರ ಒಪ್ಪಿಕೊಳ್ಳುವುದಾದರೆ, ಈ ತಿದ್ದುಪಡಿಗೆ ನಮ್ಮ ಬೆಂಬಲ ಇದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಶ್ರೀ ಚಂದ್ರಕಾಂತ್ ಬೆಲ್ಲದರವರು ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

† ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೆ, ಈ ಒಂದು ವಿಧೇಯಕವನ್ನು ಮಾನವೀಯತೆಯ ದೃಷ್ಟಿಯಿಂದ ಮೂರು ವಿಶ್ವವಿದ್ಯಾನಿಲಯಗಳಲ್ಲಿ ಆದರೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ೪೩ ಉಪನ್ಯಾಸಕರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೬೮ ಉಪನ್ಯಾಸಕರುಗಳು, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ೯ ಉಪನ್ಯಾಸಕರು. ಒಟ್ಟು ೧೨೦ ಉಪನ್ಯಾಸಕರುಗಳನ್ನು ತಾತ್ಕಾಲಿಕವಾಗಿ ಸೆಕ್ಷನ್ ೫೦ (೬) ಪ್ರಕಾರ ವಿಶ್ವವಿದ್ಯಾನಿಲಯದ ಅಥಾರಿಟಿಯವರು ಇವರನ್ನು ನೇಮಕ ಮಾಡಿಕೊಂಡಿದ್ದಾರೆ. ಅವರಿಗೆ ಯಾವ ಒಂದು ಸ್ಥಿರತೆ ಇಲ್ಲ ಬಹಳ ವರ್ಷಗಳಿಂದ ತಾತ್ಕಾಲಿಕವಾಗಿ ಇವರು ಕೆಲಸ ಮಾಡುತ್ತಿದ್ದಾರೆ. ಇವರಿಗೆ ಬೇಕಾದ ಎಲ್ಲಾ ಅರ್ಹತೆಗಳೂ ಇವೆ. ಇವರುಗಳನ್ನು ಖಾಯಂ ಮಾಡುವುದರ ಬಗ್ಗೆ ಇವರ ಬೇಡಿಕೆ ಬಹಳ ವರ್ಷಗಳಿಂದ ಸರ್ಕಾರದ ಮುಂದಿತ್ತು. ಆ ಬೇಡಿಕೆಯನ್ನು ಸರ್ಕಾರ ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಈಗಾಗಲೇ ಇದಕ್ಕೆ ಪ್ರತ್ಯೇಕವಾದ ಪಂಚೂದೆಯನ್ನು ತರಬೇಕೆಂದು ತೀರ್ಮಾನ ಮಾಡಿದೆ. ಅದರ ಪ್ರಕಾರ ತಂದಿರುವಂತಹದ್ದು ಈ ತಿದ್ದುಪಡಿ ವಿಧೇಯಕ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ ೧೯೭೬ಕ್ಕೆ ಯಾವ ತಿದ್ದುಪಡಿಯನ್ನು ತರುತ್ತಿಲ್ಲ. ಹೊಸದಾಗಿ ಪ್ರತ್ಯೇಕವಾದ ವಿಧೇಯಕವನ್ನು ತಂದಿದ್ದೇವೆ.

SRI MALLIKARJUNA M. KHARGE.—For 120 people, you are bringing this amendment.

SRI RAMESH KUMAR.—They are not yet recognised as human beings. 40 years are over but still we have not done justice to them. In all respects, should they be a begging class ? You want to keep SCs in the same way ? It is being discussed and discussed. Do you want to keep them as asking class ? You want to treat them as untouchables ? treat them as civilians and human beings. ಮಾನ್ಯ

ವೀಯಂತೆಯ ದೃಷ್ಟಿ ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಶ್ರೀಮಾನ್ ಖರ್ಗೆಯವರೇ, ನೀವು ಹೇಳಿದಂತಹ ಕ್ಲಾಸ್ ಯಾವುದು ಇದೆ ? ಆ ಕ್ಲಾಸ್ ಬಗ್ಗೆ ಮಾನವೀಯತೆ ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಬಿ. ಸೋಮಶೇಖರ್.—ಮುಂದೆ ಬರುತ್ತೇನೆ. ಈ ಬಗ್ಗೆ ಮಾನ್ಯ ರಮೇಶ್ ಕುಮಾರ್ ಅವರಿಗೆ ಎಷ್ಟೂ ನೋವು ಇದೆಯೋ ಅಷ್ಟೇ ನೋವು ನನಗೂ ಇದೆ. ನೋವಿಲ್ಲ ಎಂದು ಹೇಳುತ್ತಿಲ್ಲ ಮುಂದೆ ಆ ಬಗ್ಗೆ ತರುತ್ತೇನೆ. ಇರತಕ್ಕ ಒಂದು ನಿಯಮದಲ್ಲಿ ಇದು ತಿದ್ದುಪಡಿ ಆಲ್ಲ. ಇದು ಪ್ರತ್ಯೇಕವಾದ ಒಂದು ಹೊಸ ವಿಧೇಯಕ. ೧೨೦ ಜನ ಕಾಂಟ್ರಾಕ್ಟ್ ಟೀಚರ್ಸ್ ಪರ್ಮನೆಂಟ್ ಮಾಡಿದಮೇಲೆ ಇಲ್ಲಿಗೇ ಮುಗಿಯಂತ್ತದೆ. ಇದಂ ಶಾಶ್ವತವಾಗಿ ಇರತಕ್ಕ ಒಂದು ವಿಧೇಯಕ ಅಲ್ಲ. ಇದರ ಪ್ರಕಾರ ೧-೩-೮೪ರ ಹಿಂದೆ ನೇಮಕ ಮಾಡಿರುವವರು ಇರಬೇಕು ಹಾಗೂ ೧-೩-೮೬ರ ಒಳಗೆ ಕೆಲಸ ಮಾಡುತ್ತಾ ಇರಬೇಕು. ಈ ವಾಪ್ತಿಯಲ್ಲಿ ಬರತಕ್ಕ ೧೨೦ ವ್ಯಕ್ತಿಗಳಿಗೆ ಶಾಶ್ವತವಾಗಿ ಖಾಯಂ ಮಾಡತಕ್ಕ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಈ ೧೨೦ ಜನ ರೋಸ್ಟರ್ ಪ್ರಕಾರ ನೇಮಕ ಆಗಿಲ್ಲ. ಅದನ್ನು ಒಪ್ಪಿಕೊಳ್ಳಬೇಕು. ಈ ೧೨೦ ಜನ ರನ್ನು ಖಾಯಂ ಮಾಡುತ್ತಿರುವುದು ಸೂಪರ್ ನ್ಯೂಮರರಿ ಪೋಸ್ಟ್‌ನಲ್ಲಿ. ಇವರನ್ನು ಖಾಲಿ ಇರತಕ್ಕ ಹುದ್ದೆಗಳಲ್ಲಿ ತುಂಬುತ್ತಾ ಇಲ್ಲ. ಮುಂದೆ ಯಾವುದೇ ಡಿಪಾರ್ಟ್‌ಮೆಂಟ್‌ನಲ್ಲಿ ಹುದ್ದೆಗಳು ಖಾಲಿ ಯಾದರೆ, ಉದಾಹರಣೆಗೆ ಬಾಟನಿ ಡಿಪಾರ್ಟ್‌ಮೆಂಟ್‌ನಲ್ಲಿ ೧೦ ಹುದ್ದೆಗಳು ಬಂದರೆ ಆ ೧೦ ಹುದ್ದೆಗಳನ್ನು ರೋಸ್ಟರ್ ಪ್ರಕಾರ ತುಂಬುತ್ತೇವೆ. ಅದರಲ್ಲಿ ಮೊದಲ ವೇಕೆನ್ಸಿ ಎಸ್. ಸಿ.ಗೆ ಹೋಗುತ್ತದೆ. ಈ ೧೨೦ ಜನದಲ್ಲಿ ಯಾರಾದರೂ ಎಸ್. ಸಿ. ರವರು ಇದ್ದರ ಅವರನ್ನು ಆ ವೇಕೆನ್ಸಿಯಲ್ಲಿ ತುಂಬುತ್ತೇವೆ. ಯಾರಾದರೂ ಎಸ್. ಸಿ. ದವರು ಇಲ್ಲದಿದ್ದರೆ ಪ್ರತ್ಯೇಕವಾಗಿ ಅಲ್ಲಿ ತುಂಬುತ್ತೇವೆ. ಅವರದ್ದು ಹೀಗೇ ಉಳಿಯುತ್ತದೆ. ಆದುದರಿಂದ ರೋಸ್ಟರ್ ಪದ್ಧತಿಗೆ ಯಾವುದೇ ರೀತಿ ತೊಂದರೆಯಾಗುವುದಿಲ್ಲವೆಂದು ಸ್ಪಷ್ಟ ಮಾಡಬಯಸುತ್ತೇನೆ.

ಶ್ರೀ ಎಂ. ಎಂ. ಖರ್ಗೆ —ತೊಂದರೆ ಎಂದು ಹೇಳುತ್ತಾ ಇಲ್ಲ. ಆಟೆಂಡರ್ಸ್ ಪೋಸ್ಟ್‌ನಲ್ಲೂ ೧೮ ಪರ್ಸೆಂಟ್ ಆಗಿಲ್ಲ ಎಂದೂ ನಾನು ಹೇಳಿದ್ದು.

ಶ್ರೀ ಬಿ. ಸೋಮಶೇಖರ್.—ಈ ೧೨೦ ಜನರನ್ನು ಏನು ಖಾಯಂ ಮಾಡುತ್ತಿದ್ದೇವೆ ಇವರನ್ನು ಯಾವುದೇ ರೋಸ್ಟರ್ ಪದ್ಧತಿಯ ಹುದ್ದೆಗಳಿಗೆ ತುಂಬುತ್ತಾ ಇಲ್ಲ. ಪ್ರತ್ಯೇಕವಾಗಿ ಸೂಪರ್‌ನ್ಯೂಮರರಿ ಪೋಸ್ಟ್ ಮಾಡಿ ತುಂಬುತ್ತಿದ್ದೇವೆ. ಇದರಿಂದಾಗಿ ವಿಶ್ವವಿದ್ಯಾನಿಲಯದಲ್ಲಿನ ರೋಸ್ಟರ್ ಪದ್ಧತಿ ಏನಿದೆ ಇದಕ್ಕೂ ಅದಕ್ಕೂ ಸಂಬಂಧ ಇಲ್ಲ. ಆ ಒಂದು ದೃಷ್ಟಿಯಿಂದ ಈವಿ ಧೇಯಕವನ್ನು ತಂದಿದ್ದೇವೆ. ಮಾನ್ಯ ಖರ್ಗೆಯವರು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿನ ಶ್ರೇಣಿಗಳಲ್ಲಿ ಎಸ್. ಸಿ. ಎಸ್. ಟಿ. ಯವರು ಶೇಕಡಾವಾರು ಎಷ್ಟು ಜನ ಇದ್ದಾರೆಂದು ಹೇಳಿದ್ದಾರೆ. ಅದು ನನಗೂ ಸಂತೋಷ ತರತಕ್ಕಂತಹ ವಿಷಯ ಅಲ್ಲ. ಆ ಬಗ್ಗೆ ದುಃಖಪಡಬೇಕಾಗುತ್ತದೆ. ಅದು ಎಲ್ಲರಿಗೂ ತಲೆತಗ್ಗಿಸತಕ್ಕಂತಹ ವಿಚಾರವಾಗಿದೆ. ಬಹಳ ವರ್ಷಗಳಿಂದಲೇ ಇದು ಆಗಬೇಕಾಗಿತ್ತು. ವಿಶ್ವವಿದ್ಯಾನಿಲಯದವರು ರೋಸ್ಟರ್ ಪದ್ಧತಿಯನ್ನು ಸರಿಯಾಗಿ ಪಾಲಿಸಿಲ್ಲ. ಆದರೆ ಇನ್ನು ಮುಂದೆ ಇಂತಹ ಅನ್ಯಾಯ ಆಗುವುದಕ್ಕೆ ಸರ್ಕಾರ ಬಿಡುವುದಿಲ್ಲ. ನಾವು ಈಗಾಗಲೇ ಇಂಟರ್ ಯೂನಿವರ್ಸಿಟಿಯ ಒಂದು ಬೋರ್ಡ್‌ನ್ನು ಮಾಡಿದೆ ವೆ. ಅದಕ್ಕೆ ಈ ಮನೆಯಿಂದಲೇ ಆಜ್ಞೆ ಪಾಸ್ ಆಗಿದೆ. ಅದರೊಳಗೆ ಎಲ್ಲಾ ವಿಶ್ವವಿದ್ಯಾನಿಲಯಗಳನ್ನೂ ಅಳವಡಿಸಿದ್ದೇವೆ ಅದರಲ್ಲಿ ಕಾನೂನು ಇಲಾಖೆಯವರೂ ಇದ್ದಾರೆ. ಹಾಗೂ ಆರ್ಥಿತ ಇಲಾಖೆಯ ಪ್ರತಿನಿಧಿಗಳೂ ಇದ್ದಾರೆ.

ಎಲ್ಲಾ ಪ್ರತಿನಿಧಿಗಳನ್ನು ಕರೆದು ಚರ್ಚೆಮಾಡಿ ಎಲ್ಲಾ ವಿಶ್ವವಿದ್ಯಾನಿಯಗಳಲ್ಲಿ ಎಷ್ಟು ಹುದ್ದೆಗಳು ಇವೆ, ಆ ಹುದ್ದೆಗಳಿಗೆ ಯಾವ್ಯಾವ ಪಂಗಡದವರನ್ನು ತುಂಬಬೇಕು ಅದನ್ನು ಮಾಡಿದ್ದೇವೆ. ಪರಿಶೀಲನೆ ಮಾಡತಕ್ಕ ಸಭೆಯಲ್ಲಿ ಯಾರಿಗೆ ಅನ್ಯಾಯವಾಗಿದೆ ಎಂಬುದನ್ನು ಆ ಸಭೆಯ ಮುಂದಿಟ್ಟು ಇನ್ನು ಮುಂದೆ ಅನ್ಯಾಯವಾಗದ ಹಾಗೆ ನೋಡಿಕೊಳ್ಳಲಾಗುವುದು. ಯಾವ ವರ್ಗದವರಿಗೆ ಅನ್ಯಾಯವಾಗಿದೆ ಅವರಿಗೆ ನೇಮಕಾತಿ ಸಿಗಬೇಕು. ಯಾವ ವರ್ಗದವರಿಗೆ ವಿಸಲಾತಿಯಲ್ಲಿ ಅನ್ಯಾಯವಾಗಿದೆ ಅವರನ್ನು ನೇಮಕ ಮಾಡತಕ್ಕ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮಂತ್ರಿಗಳು ಇನ್ನು ಮುಂದೆ ನಾವು ಸರಿಪಡಿಸುತ್ತೇವೆಂದು ಹೇಳಿದರು ಸಂತೋಷ. ಆದರೆ ಇವರೇ ಮಂತ್ರಿಗಳಾಗಿದ್ದಾಗ ಹಿಂದೆ ಈ ವಿಷಯದಲ್ಲಿ ಗಮನಹರಿಸಿ ಯೋಚನೆ ಮಾಡಬೇಕಾಗಿತ್ತು. ಇದು ಡಾ: ತಿಪ್ಪೇಸ್ವಾಮಿಯವರ ವರದಿಯಿಂದ ಗೊತ್ತಾಗಿದೆ. ನೀವು ಮಂತ್ರಿಮಂಡಲದಲ್ಲಿ ಇದ್ದಾಗಲೂ ಕೂಡ ಈ ಪರಿಪಾಠ ನಡೆದುಕೊಂಡು ಬಂದಿದೆ. ನೀವು ಇದ್ದಾಗ ಇದರ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ಬಿ. ಸೋಮಶೇಖರ್.— ಆ ದೃಷ್ಟಿಯಿಂದ ಹೇಳುವುದಾದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಎಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇಕಡ ೧೮ರಷ್ಟು ಮೀಸಲಾತಿ ದೊರೆತಿಲ್ಲ ಅಂತಹ ಕಡೆಗಳಲ್ಲಿ ಅದು ಸಿಗುವವರೆಗೂ ಶೇಕಡ ೨೫ರಷ್ಟು ನೇಮಕ ಮಾಡಬೇಕೆಂದು ಒಂದು ನಿರ್ಧಾರ ಮಾಡಿದ್ದೇವೆ. ಅದನ್ನು ಎಲ್ಲಾ ಇಲಾಖೆಯವ್ಲಯೂ ಪಾಲನೆ ಮಾಡುತ್ತಿದ್ದಾರೆ. ಈ ನಿಯಮದ ಅಡಿಯಲ್ಲಿಯೇ ೧೯೮೪ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡುವಾಗ ೧೯ ಸಾವಿರ ಹುದ್ದೆಗಳಿಗೆ ನೇಮಕ ಮಾಡುವಾಗ ಶೇಕಡ ೨೫ರಷ್ಟು ಮೀಸಲಾತಿಯನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಕೊಟ್ಟಿದ್ದೇವೆ. ಶೇಕಡ ೧೮ರಷ್ಟು ಹುದ್ದೆಗಳು ಭರ್ತಿಯಾಗುವವರೆಗೆ ಎಲ್ಲಾ ಇಲಾಖೆಯಲ್ಲಿಯೂ ಆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಈ ವರ್ಗದವರಿಗೆ ಅನ್ಯಾಯವಾಗಿದೆ ಎನ್ನುವುದು ಗೊತ್ತಾದ ಮೇಲೆ ಶೇಕಡ ೨೫ರಷ್ಟು ಹುದ್ದೆಗಳನ್ನು ಅವರಿಗೆ ಕೊಡಬೇಕೆಂದು ಮಾಡಿದ್ದೇವೆ. ನಮ್ಮ ಸರ್ಕಾರ ಮೀಸಲಾತಿಗೆ ಬದ್ಧವಾಗಿದೆ, ತಾವು ಆ ಬಗ್ಗೆ ಹಿಂಜರಿಯಬೇಕಾಗಿಲ್ಲ. ಬ್ಯಾಕ್‌ಲಾಗ್ ತುಂಬುವುದಕ್ಕೆ ಇಂಟರ್ ಯೂನಿವರ್ಸಿಟಿ ಬೋರ್ಡ್‌ನಲ್ಲಿ ಎಷ್ಟು ಸಾಧ್ಯವೋ ಅಷ್ಟು ರಿಕ್ರೂಟ್ ಮಾಡಿ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸಾಧ್ಯವಾದರೆ ಮಾಡುತ್ತೇವೆಂದು ಹೇಳಿದರೆ ಹೇಗೆ ? ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಲಿಕ್ಕೆ ನಿಮ್ಮ ಸರ್ಕಾರ ಹೊಸ ಸಂಪ್ರದಾಯವನ್ನು ಹಾಕಿಲ್ಲ. ಎಲ್ಲಾ ಇಲಾಖೆಗಳಿಗೂ ಆ ಒಂದು ಇನ್‌ಸ್ಟ್ರೆಕ್ಷನ್ ಕೊಟ್ಟಿದ್ದಾರೆ. ಎಲ್ಲಾ ಕಡೆ ಐಸಿಆರ್‌ಸಿ ಅವರು ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡುತ್ತಾರೆ. ಯೂನಿವರ್ಸಿಟಿಯಲ್ಲಿ ಏನಾಗುತ್ತಿದೆ ಎನ್ನುವುದನ್ನು ಹೇಳಿ. ಯೂನಿವರ್ಸಿಟಿಗಳಲ್ಲಿ ಏನು ಮಾಡುತ್ತಾರೆಂದರೆ, ಯಾರೋ ಒಬ್ಬರಿಗೆ ಅಪಾಯಿಂಟ್ ಮಾಡಬೇಕೆಂದರೆ ಅವರ ಮನಸ್ಸಿನಲ್ಲಿರತಕ್ಕವನಿಗೆ ಏನು ಕ್ವಾಲಿಫಿಕೇಷನ್ ಇರುತ್ತದೆ ಅದನ್ನು ನೋಂಡಿಕೊಂಡು ಜಾಹೀರಾತು ಕೊಡುತ್ತಾರೆ. ಎಂ.ಎ., ಪಿಎಚ್‌ಡಿ, ಎಂ.ಎ., ಫಸ್ಟ್‌ಕ್ಲಾಸ್ ೧೦ವರ್ಷ ಸರ್ವೀಸ್, ೧೧ವರ್ಷ ಸರ್ವೀಸ್ ಅವರಂ ಯಾರಿಗೆ ಕೊಡಬೇಕೆಂದು ಇರುತ್ತಾರೆ ಅವನಿಗೆ ಅನುಕೂಲವಾಗತಕ್ಕ ಜಾಹೀರಾತು ಕೊಡುತ್ತಾರೆ. ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿ ಕ್ವಾಲಿಫಿಕೇಷನ್ ರಿಲಾಕ್ಸ್ ಮಾಡುತ್ತೀರಾ ?

ಶ್ರೀ ಬಿ. ಸೋಮಶೇಖರ್.— ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡುವ ಅವಶ್ಯಕತೆ ಬಂದರೆ ಹಿಂಜರಿಯುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗ ಮೀಸಲಾತಿಯಲ್ಲಿ ಕೊರತೆ ಇದೆ.

ಶ್ರೀ ಬಿ. ಸೋಮಶೇಖರ್.— ಬ್ಯಾಕ್‌ಲಾಗ್ ತುಂಬುವ ದೃಷ್ಟಿಯಿಂದ ಸರ್ಕಾರ ಪ್ರಯತ್ನ ಮಾಡುತ್ತದೆಂದು ಹೇಳುತ್ತೇವೆ ದಯವಾಡಿ ಈ ಮೆಸೂದೆಗೆ ಸದನ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ, "೧೯೮೬ನೇ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಶಿಕ್ಷಕರ (ಹಂಗಾಮಿ ಉಪನ್ಯಾಸಕರ ವಿಲೀನೀಕರಣ) ವಿಧೇಯಕವನ್ನು ವಿ. ಪ. ನಲ್ಲಿ ಅಂಗೀಕರಿಸಿದಂತೆ ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ರಿಂದ ೩

ಅಧ್ಯಕ್ಷರು.— ಖಂಡ ೩ಕ್ಕೆ ಮಾನ್ಯ ಬಸವಲಿಂಗಪ್ಪನವರು ತಿದ್ದುಪಡಿಯನ್ನು ಸೂಚಿಸಿದ್ದರು, ಅವರು ಸಭೆಯಲ್ಲಿಲ್ಲ.

"ಖಂಡ ೨ರಿಂದ ೩ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ (ಖಂಡ ೨ರಿಂದ ೩ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ " ಮೊದಲನೇ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಹಿತ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವನ್ನು ಅಂಗೀಕರಿಸಲ್ಪಟ್ಟಿತು ಹಾಗೂ

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್.—

" ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಶಿಕ್ಷಕರ (ಹಂಗಾಮಿ ಉಪನ್ಯಾಸಕರ ವಿಲೀನೀಕರಣ) ವಿಧೇಯಕ ೧೯೮೭ ವಿ.ಪ.ನಲ್ಲಿ ಅಂಗೀಕರಿಸಿದಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು.—

" ಪ್ರಸ್ತಾವ ಏನೆಂದರೆ, ೧೯೮೭ನೇ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಶಿಕ್ಷಕರ (ಹಂಗಾಮಿ ಉಪನ್ಯಾಸಕರ ವಿಲೀನೀಕರಣ) ವಿಧೇಯಕ ತಿದ್ದುಪಡಿ ವಿ.ಪ.ನಲ್ಲಿ ಅಂಗೀಕರಿಸಿದಂತೆ ಅಂಗೀಕರಿಸಲಾಗುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಪಂಸೂದೆಗೆ ಒಪ್ಪಿಗೆ ನೀಡಲಾಯಿತು.

೭–೦೦ ಪಿ. ಎಂ.

ಶಾಸನಬದ್ಧ ನಿರ್ಣಯ

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಮಂತ್ರಿಯವರು).— ಮಾನ್ಯ ಅಧ್ಯಕ್ಷರೇ,

" ೧೯೨೩ನೇ ಇಸವಿಯ ಹತ್ತಿ ಸಾಗಾಣಿಕೆ ಶಾಸನದ (೧೯೨೩ನೇ ಇಸವಿಯ ಕೇಂದ್ರ ಶಾಸನ ಸಂಖ್ಯೆ.೩) ೩ನೇ ಕಲಮಿನಿಂದ ಲಭಿಸಿದ ಅಧಿಕಾರವನ್ನು ಉಪಯೋಗಿಸಿ ಮಾಡಲು ದ್ದೇಶಿಸಿರುವ ೧೯೮೭ನೇ ಇಸವಿಯ ಹತ್ತಿ ಸಾಗಾಣಿಕೆ (ಕರ್ನಾಟಕ ತಿದ್ದುಪಡಿ) ನಿಯಮದ ಕರಡನ್ನು " ಒಪ್ಪಬೇಕೆಂದು ಸಭೆಯ ಮುಂದೆ ಮಂಡಿಸುತ್ತೇನೆ "

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ, " ೧೯೨೩ನೇ ಇಸವಿಯ ಹತ್ತಿ ಸಾಗಾಣಿಕೆ ಶಾಸನದ (೧೯೨೩ನೇ ಇಸವಿಯ ಕೇಂದ್ರ ಶಾಸನ ಸಂಖ್ಯೆ.೩) ೩ನೇ ಕಲಮಿನಿಂದ ಲಭಿಸಿದ ಅಧಿಕಾರವನ್ನು ಉಪಯೋಗಿಸಿ ಮಾಡಲಉದ್ದೇಶಿಸಿರುವ ೧೯೮೭ನೇ ಇಸವಿಯ ಹತ್ತಿ ಸಾಗಾಣಿಕೆ (ಕರ್ನಾಟಕ ತಿದ್ದುಪಡಿ) ನಿಯಮದ ಕರಡನ್ನು ಒಪ್ಪುವುದು.